DEMAND No. 1

"That a sum not exceeding Rs. 19,39,86,000 on Revenue Account and Rs. 4,50,54,000 on Capital Account inclusive of the sum granted 'on account' be granted to the Government to defray the the charges which will come in course of payment during the financial year ending 31st day of March 1931 in respect of "Agriculture (excluding Horticulture and Drought Prone Areas Programmes)".

DEMAND No. 3

"That a sum not exceeding Rs. 5.92,38 000 on Revenue Account and Rs. 1,45,75,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1981 in in respect of "Soil and Water Conservation".

Statement by Minister

re: Police firing at Naragund Dharwar District.

MR. SPEAKER.—Now, I call upon the Hon'ble Chief Minister to make his statement as promised by him in the morning.

SRI R. GUNDU RAO.—Mr. Speaker Sir, I would like to make the following statement:

SITUATION AT NAVALGUND, NARGUND AND GADAG ON 21st JULY, 1980.

The ryots of Navalgund, Nargund, Ron and Hubli in Dharwar District and Saundathi and Ramdurg in Belgaum District who were under Malaprabha Project area have been agitating for some time, against the collection of betterment levy, water tax, etc. They formed "Central Co-ordination Committee of Ryots" in their meeting at Nargund on 10-7-1980 to agitate for their cause. In their meeting on 15-7-1980 they decided to observe bundh at Nargund, Navalgund, Saundathi and Ramdurg on 21-7-1980. They also decided to stop traffic on Sholapur Hubli Highway.

The call for bundh resulted in serious violent incidents at Navalagund and Nargund.

Navalgund :—In view of the above call for bundh Police bandobust arrangements were made. One Dy Supdt. of Police, Circl- Inspector of Police, 3 Police Sub-Inspectors and 2 Platoons of the District Armed Reserve were deployed at Navalgund. At about 1.00 p.m. on 21-7-1980. 4000 ryots took out a procession with sticks and clubs and placards and some of them carried stones The processionists came from different parts and they indulged in pelting of stones on Banks, private houses, Government vehicles, telephone exchanges Chemist shops and Police vehicles. Sticks and clubs were thrown at, the Policemen and Police vehicles. They also damaged telephone wires and vehicles of irrigation department. They set fire to a truck of the irrigation department and caused damage to 2 Police vehicles. The Tahsildar promulgated prohibitory orders u/s 144 Cr. P. C. for a period of 7 days from 2-30 pm. on 21-7-80. In the stone pelting Dy. Supdt. of Police Hubli and one Police Constable of District Armed Reserve sustained grievous injuries on their faces.

The agitators were on rampage and caused maximum damage to the residential houses of the officers or irrigation department and also their vehicles. They completely ransacked 3 irrigation department offices and set fire to furnitures and records including telephone wires at these offices.

As lathi-charge and teargas shells proved ineffective Tahsildar ordered firing. 3 rounds of 303 ammunition fired in the air. As it proved ineffective more rounds were fired in which one person sustained injury and he was removed to the hospital where he is progressing. A little later another section of the crowd, about 3000, came to the town area and started causing heavy damage to private and public property. Again the Police and the Tahasildar warned them. The teargas and lathi-charge did not have any effect. On the orders of Tahsildar the Police fired rounds on the air and it had no effect on the mob. 2 more rounds were fired in which 2 persons sustained injuries. One of them was shifted to KMC Hospital, Hubli. But he died on the way. He is an agriculturist aged about 20 years by name Basappa from Alagwadi village. The other injured person is progressing in the Hospital.

Additional reinforcement have reached Navalgund and the situation is under control. In this connection 5 cases have been registered by the police, 15 persons have been arrested. The extent of loss to private and public properties is extensive and it has not yet been assessed.

Naragund :—As part of the programme of bundh at Nargund at 11.30 A.M. 10,000 ryots took out a procession from Nargund Municipality. The organisers of the procession had given an undertaking to the Police on 20-7-1980 that the procession would be peaceful. While the Tahsildar was waiting for the leaders of the procession to present their memorandum, the processionists turned violent and become uncontrollable. They pelted stones, and attacked Police Officers and set fire to the Tahsildar's Office records and furnitures, burnt 2 Police Jeeps and One Police Van. The Sub-Registrar's Office, City Survey Offices and Excise Office were ransacked and the records were set on fire.

In the mob attack Assistant Reserve Sub-Inspector Shri. Nagappa Akki of District Armed Reserve, Dharwar, was killed on the spot. Police Sub-Inspector Shri. Sikandar Bhakt Patil of Nargund Police Station who was seriously injured and shifted to KMC Hospital, Hubli later succumbled to the injuries. Dy. Superintendent of Police, Gadag, Shri Praveen Kumar, CPI, Shirahatti, Shri Mulla, CPI, Ron Shri Biradar, 2 PSIs and Tahsildar Nargund, 2 HCs and 21 PCs, 2 PSIs, Tahsildar and 12 PCs have been admitted as in-patients in KMC Hubli. All of them have received grievous injuries. It is learnt that CPI, Ron Shri Biradar and a Police Constable of District Armed Reserve, Dharwar are unconscious with head injuries and in a serious condition. The mob also damaged the Hospital and the doctor was also injured. 3 revolvers and one rifle were snatched from the Police and set on fire, by the mob. The Police opened fire in self-defence in which one civilian whose identity is yet to be established is killed.

Deputy Commissioner, Dharwar, Superintendent of Police, Dharwarand the D. I. G. of Police, Belgaum have reached the spot and the situation is now under control.

It is learnt that the mob indulged in extensive stone throwing and damaged public property.

The Police have taken up cases.

Gadag : - At Gadag on 21-7-1980 the Janata party organised a procession (5000) was taken out between 10.00 am to 12.00 noon to protest against price rise in general The processionists pelted stones and damaged hotels and shops. After presenting a memorandum to the Asst. Commissioner the processionists dispersed and went in groups and indulged in heavy stone pelting throughout the Town. The stone pelting continued till 5.00 pm As teargas proved ineffective Police opened fire to disperse the unruly mob. In the firing 14

persons were injured. In the stone pelting incidents 2 Police Sub-Inspectors 2 Asst. Sub-Inspectors and 8 Police constables have received bleeding injuries.

It is learnt that the mob indulged in looting and 4-5 cloth shops have been looted by them. Extensive damage has been caused to the residential houses and shops in different areas. 10 KSRTC buses are also damaged. The extent of damage is not yet assessed.

The Additional District Magistrate issued night curfew orders for 21-7-1980 night and prohibitory orders u/s. 144 Cr. P. C. in all the taluk headquarters of Dharwar Dist.

The Inspector General of Police and the Dy. Inspector General of Police., Belgaum are on the spot. The situation is reported to be under control.

ಇದು ನಿನ್ನೆ ನಡೆದಂತಹ ಘಟನೆಯ ವರದಿ. ಮತ್ತೆ ಮಾನ್ಯ ಸದಸ್ಯರುಗಳು ವಿಚಾರವನ್ನು ಪ್ರಸ್ತಾಪ ಮಾಡುತ್ತಾ ಬೆಟರ್‌ಮೆಂಟ್ ಲೆವಿ ವಾಟರ್ ಟ್ಯಾಕ್ಸ್ ಮತ್ತಿತ್ತರ ತೆರಿಗೆಗಳನ್ನು ರದ್ದು ಮಾಡಬೇಕೆಂದು ರೈತರು ಸುಮಾರು ೧೯೭೬ನೇ ಇಸವಿಯಿಂದ ಸರ್ಕಾರಕ್ಕೆ, ಮಂತ್ರಿಗಳಿಗೆ, ಮುಖ್ಯ ಮಂತ್ರಿಗಳಿಗೆ, ಶಾಸಕರಿಗೆ, ಸ್ಥಳೀಯ ನಾಯಕರುಗಳಿಗೆಲ್ಲಾ ಮನವಿಗಳನ್ನು ಮಾಡಿಕೊಂಡು ಬಂದರೂ ಸಹ ಯಾವುದೇ ರೀತಿಯ ಪರಿಹಾರ ಸಿಗದೆ ಇದ್ದುದರಿಂದ ಅವರು ಈ ರೀತಿ ಚಳುವಳಿಯನ್ನು ಪ್ರಾರಂಭ ಮಾಡಲಿಕ್ಕೆ ಕಾರಣವಾಯಿತು ಎಂದು ಇವತ್ತು ಮಾತನಾಡಿದ ಬಹುಪಾಲು ಮಾನ್ಯಸದಸ್ಯರುಗಳು ಹೇಳಿದರು ಅವರು ಮಾತನಾಡಿದ್ದಕ್ಕೆಲ್ಲಾ ಉತ್ತರ ಕೊಡುವುದಕ್ಕೆ ಮೊದಲು ಪ್ರಾಜೆಕ್ಟಿನ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಮಲಪ್ರಭಾ ಪ್ರಾಜೆಕ್ಟಿಗೆ ಸುಮಾರು ೧೬೨ ಕೋಟಿ ರೂಪಾಯಿ ವೆಚ್ಚ ತಗಲಿದೆ. ಇದರಿಂದ ಬೆಳಗಾಂ, ಬಿಜಾಪುರ ಮತ್ತು ಧಾರವಾಡ ಜಿಲ್ಲೆಯ ಸುಮಾರು ೫.೨೬ ಲಕ್ಷ ಎಕರೆ ಭೂಮಿಯ ವ್ಯವಸಾಯಕ್ಕೆ ನೀರೊದಗುತ್ತಿದೆ. ಬೆಳಗಾಂ ಜಿಲ್ಲೆಯ ಸೌಂದತ್ತಿ, ಬೈಲಹೊಂಗಲ ತಾಲ್ಲೂಕುಗಳಿಗೂ ಹಾಗೂ ಧಾರವಾಡ ಜಿಲ್ಲೆಯ ನರಗುಂದ ನವಲಗುಂದ ತಾಲ್ಲೂಕುಗಳಿಗೂ ಅನುಕೂಲವಾಗುತ್ತಿದೆ. ಈ ಒಂದು ನೀರು ಸರಬರಾಜು ಸುಮಾರು ೧೯೭೪-೭೫ ರಿಂದ ನರಗುಂದ ತಾಲ್ಲೂಕಿಗೆ ಆಗುತ್ತಿದೆ. ಅಲ್ಲಿ ೨.೧೨ ಲಕ್ಷ ಎಕರೆ ಜಮೀನಿಗೆ ನೀರೊದಗಿ ವ್ಯವಸಾಯ ಕಾರ್ಯ ನಿರಾತಂಕವಾಗಿ ನಡೆಯುತ್ತಿದೆ. ನವಲಗುಂದ ಮತ್ತು ಸೌಂದತ್ತಿ ತಾಲ್ಲೂಕುಗಳಲ್ಲಿ so far, we have spent Rs. 104 crores on the Dams and Canals. ಇರಿಗೇಷನ್ ಏರಿಯಾದಲ್ಲಿ ಈ ಒಂದು ಬೆಟರ್‌ಮೆಂಟ್ ಟ್ಯಾಕ್ಸನ್ನು ಹಾಕಿರುವುದು ನಿಜ. ಬೆಟರ್‌ಮೆಂಟ್ ಲೆವಿಯನ್ನೇ ಕೊಡಬಾರದು ಎಂದು ಹೇಳುವುದು ಸರಿಯಲ್ಲ. ಆದರೆ ಲೆವಿ ಹಾಕುವಾಗ ಸರಿಯಾಗಿ ಹಾಕಿಲ್ಲ, ಅಧಿಕಾರಿಗಳು ಎಲ್ಲೋ ಕುಳಿತುಕೊಂಡು ಹಾಕಿಬಿಡುತ್ತಾರೆ, ಯಾವುದೋ ಕೆಳಮಟ್ಟದ ಅಧಿಕಾರಿ ಅದನ್ನು ಹಾಕುತ್ತಾನೆ ಎಂದು ಏನು ಶಂಕೆ ವ್ಯಕ್ತಪಡಿಸಿದ್ದಾರೆ ಆ ದೃಷ್ಟಿಯಿಂದ ಸ್ವಲ್ಪ ಅನ್ಯಾಯಗಳು ನಡೆದಿರಬಹುದು. ಈ ಕಾರಣದಿಂದಲೇ ಇದನ್ನೆಲ್ಲಾ ಪೂರ್ತಿಯಾಗಿ ವಿಚಾರಣೆ ಮಾಡಬೇಕು ಎಂದು ನಮ್ಮ ಸರ್ಕಾರ ಇದ್ದಾಗ ತಡೆಯಾಜ್ಞೆ ಕೊಟ್ಟಿದ್ದ ಎಂದು ಅವರು ಹೇಳಿದ್ದಾರೆ. ಆ ತಡೆಯಾಜ್ಞೆ ಈಗಲೂ ಜಾರಿಯಲ್ಲಿದೆ. ಆದರೆ ತಡೆಯಾಜ್ಞೆ ಕೊಟ್ಟಂಥ ಸಮಯ ಚುನಾವಣೆ ಸಮಯ ಅದು ಯಾವುದೇ ಸಮಯ ಇರಲಿ, ಅದು ಮಹತ್ವವಲ್ಲ, ಚುನಾವಣಾ ಪ್ರಚಾರಕ್ಕಾಗಿ ಅವರೆಲ್ಲಾ ಹೋಗಿ ಸೇರಿದ್ದರು. ಆ ಸಂದರ್ಭದಲ್ಲಿ ಆ ಜನ ಎಲ್ಲಾ ಈ ತರಹ ಅನ್ಯಾಯ ನಡೆದಿದೆ ಎಂದು ಹೇಳಿದಾಗ, ನಾನು ಇದನ್ನು ವಿಚಾರಣೆ ಮಾಡಿಸುತ್ತೇನೆ. ಅಲ್ಲಿಯುವರಿಗೂ ವಸೂಲು ಮಾಡುವುದು ಬೇಡ ಎಂದು ಆಜ್ಞೆ ಹೊರಡಿಸಿ ಅವರು ಬಂದರು. ಇವತ್ತೂ ಆ ಆಜ್ಞೆ ಹಾಗೆಯೇ ಇದೆ. ಆದರೆ ಹಿಂದಿನ ರೆವಿನ್ಯೂ ಮಂತ್ರಿಗಳು ಹೋಗಿದ್ದಾಗ ಇದೇನು ಇಷ್ಟು ಕಡಿಮೆ ಹಾಕಿದ್ದಾರಲ್ಲಾ ಇದನ್ನು ಏತಕ್ಕೆ ಜಾಸ್ತಿ ಮಾಡಬಾರದು ಎಂದು ಹೇಳಿ ಬಂದರು. ಸರ್ಕಾರ ಇಷ್ಟೊಂದು ಹಣ ಖರ್ಚು ಮಾಡಿದೆ, ರೈತರು ಇದರಿಂದ ಇಷ್ಟೊಂದು ಉತ್ಪತ್ತಿ ಪಡೆಯುತ್ತಿದ್ದಾರೆ, ಈಗ ಬೆಟರ್‌ಮೆಂಟ್ ಲೆವಿ ಹಾಕಿರುವುದು ಬಹಳ ಕಡಿಮೆ ಆಯಿತು, ಆದ್ದರಿಂದ ಇದನ್ನು ಏಕೆ ಜಾಸ್ತಿ ಮಾಡಬಾರದು, ಇವತ್ತೇ ಮುಖ್ಯಮಂತ್ರಿಗಳಿಗೆ ತಿಳಿಸಿ ಜಾಸ್ತಿ ಹಾಕುವುದಕ್ಕೆ ಏರ್ಪಾಡು ಮಾಡುತ್ತೇನೆ ಎಂದು ಹಿಂದಿನ ರೆವಿನ್ಯೂ ಮಂತ್ರಿಗಳು ಹೇಳಿ

ಬಂದರು. He visited the command area of Malaprabha project in Navalgund and Nargund taluks last year and on examination it was found that the betterment levy was quite low and it should not have been less than Rs. 1,500/- per acre ಎಂದು ಹೇಳಿದ್ದಾರೆ. ಇದು ಅವರ ಅಭಿಪ್ರಾಯ ಆದರೆ ಅದು ಕ್ಯಾರೀಬೆಟ್ ಆಗಲಿಲ್ಲ. ಏತಕ್ಕೆಂದರೆ ಅವರು ಆ ಹೊತ್ತಿಗೆ ಇರಲಿಲ್ಲ. ೧೯೭೦ ನೇ ಇಸವಿಯಿಂದ ಬೆಟರ್‌ಮೆಂಟ್ ಲೆವಿ ವಿಚಾರದಲ್ಲಿ ಏನೇನು ಅನ್ಯಾಯ ಆಗಿದೆ ಎಂಬುದನ್ನು ತಿಳಿಸಿ ಅದನ್ನು ಸರಿಪಡಿಸಲು ಒಂದು ಸರ್ಕ್ಯುಲರ್ ಕಳಿಸಿಕೊಟ್ಟರು. ೧೯೭೭ನೇ ಇಸವಿಯಲ್ಲಿ ಒಂದು ಆರ್ಡರ್ ಕಳಿಸಿಕೊಟ್ಟರು ಪುನಃ ೧೧-೧-೧೯೭೮ರಲ್ಲಿ ಇನ್ನೊಂದು ಆರ್ಡರ್ ಕಳಿಸಿಕೊಟ್ಟಿದ್ದಾರೆ. ಏನೇನು ಅನ್ಯಾಯ ನಡೆದಿದೆ ಎಂಬುದನ್ನು ಇನ್ನೊಂದು ಸಾರಿ ಪರಿಶೀಲನೆ ಮಾಡಿ ಸರಿಪಡಿಸುವುದಕ್ಕಾಗಿ ಮೇಲ್ಪಟ್ಟದ ಸಮಿತಿಯನ್ನು ರಚಿಸಿ ಅದರ ಮೂಲಕ ವಿಚಾರಣೆ ಮಾಡಿಸಬೇಕು ಎಂಬ ಆರ್ಡರನ್ನು ಕಳುಹಿಸಿಕೊಟ್ಟಿದ್ದಾರೆ. ಇದೆಲ್ಲಾ ಆದರೂ ಸಹ ಒಂದು ಕಾಸೂ ಕೂಡ ವಸೂಲಾಗಲಿಲ್ಲ. ಇದರಿಂದ ಪ್ರಯೋಜನ ಪಡೆದವರೂ ಇದ್ದಾರೆ, ಪಡೆಯದವರೂ ಇದ್ದಾರೆ. ಇದರಿಂದ ಏನಾಗಿದೆಯೆಂದರೆ ಯಾರು ನಿಜವಾಗಿ ಪ್ರಯೋಜನ ಪಡೆದಿದ್ದಾರೋ ಅವರೂ ಕೊಟ್ಟಿಲ್ಲ. ಯಾರು ನಿಜವಾಗಿ ಪ್ರಯೋಜನ ಪಡೆದು ಉತ್ಪತ್ತಿ ಹೆಚ್ಚಾಗಿ ಮಾಡಿರುತ್ತಾರೋ ಅವರನ್ನು ಕೇಳುವುದಕ್ಕೆ ಹೋದರೆ ಪ್ರಯೋಜನ ಪಡೆಯದೇ ಇರುವವರನ್ನು ಮುಂದೆ ಬಿಟ್ಟು ತಪ್ಪಿಸಿಕೊಳ್ಳುತ್ತಿದ್ದಾರೆ. ಯಾರು ಯಾವುದೇ ತರಹದ ಪ್ರಯೋಜನ ಪಡೆಯದ ಪಾಪದ ಜನ ಇರುತ್ತಾರೆ ಅವರನ್ನು ಮುಂದೆ ಬಿಟ್ಟು ಬಹಳ ವರ್ಷಗಳಿಂದ ಒಂದಲ್ಲ ಒಂದು ರೀತಿಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಸರ್ಕಾರಕ್ಕೆ ಎಷ್ಟು ನ್ಯಾಯವಾಗಿ ಬರಬೇಕೋ ಎಷ್ಟು ಬಾಕಿ ಇದೆಯೋ ಅದನ್ನು ೨೦ ಕಂತಿನಲ್ಲಿ ೧೫೦ ರೂಪಾಯಿ ೨೦೦ ರೂಪಾಯಿ ೨೫೦ ರೂಪಾಯಿ ಹೀಗೆ ವಸೂಲು ಮಾಡೋಣ ಎಂದರೆ ಅದನ್ನೂ ಕೊಡುವುದಿಲ್ಲ ಎಂದು ಸತ್ಯಾಗ್ರಹ ಮಾಡುತ್ತಿದ್ದಾರೆ. ಆ ಭಾಗಕ್ಕೆ ನಾನೂ ಎರಡು ತಿಂಗಳ ಹಿಂದೆ ಹೋಗಿದ್ದಾಗ ನನಗೂ ಒಂದು ಮನವಿಯನ್ನು ಕೊಟ್ಟರು. ನಮಗೆ ಬಹಳ ಅನ್ಯಾಯವಾಗಿದೆ, ನೀವು ಇದನ್ನು ಮರುಪರಿಶೀಲನೆ ಮಾಡಬೇಕು ಎಂದು ಹೇಳಿ ಮನವಿಯನ್ನು ಕೊಟ್ಟರು. ಬೆಟರ್‌ಮೆಂಟ್ ಲೆವಿಯನ್ನೇ ತೆಗೆದು ಹಾಕಬೇಕು ಎಂಬ ವಾದ ಮಾಡಬಾರದು. ಹಾಕಿರುವುದು ಸರಿಯೋ ತಪ್ಪೋ ಎಂಬುದನ್ನು ವಿಚಾರಣೆ ಮಾಡಿಸುತ್ತೇನೆ. ಎಲ್ಲೆಲ್ಲಿ ಅಸೆಸ್‌ಮೆಂಟ್ ಸರಿಯಾಗಿ ಆಗಿಲ್ಲ, ಎಲ್ಲೆಲ್ಲಿ ಅಧಿಕಾರಿಗಳು ಟಿ.ಬಿ.ನಲ್ಲೋ ಅಥವಾ ಎಲ್ಲಾದರೂ ಕುಳಿತುಕೊಂಡು ಲೆವಿ ಹಾಕಿದ್ದಾರೆ ಅದರಲ್ಲಿ ಏನಾದರೂ ತಪ್ಪಿದ್ದರೆ ಪೂರ್ತಿಯಾಗಿ ಪರಿಶೀಲನೆ ಮಾಡಿಸಿ ನಾನು ನ್ಯಾಯ ದೊರಕಿಸಿ ಕೊಡುತ್ತೇನೆ ಎಂದು ಅವರಿಗೆಲ್ಲಾ ಹೇಳಿ ಆ ಊರಿನಿಂದ ಬಂದಿದ್ದೆ. ಆ ಭಾಗದ ಶಾಸಕರೂ ಕೂಡ ಬಂದು ನನಗೆ ಆ ವಿಚಾರವಾಗಿ ಹೇಳಿದರು. ಅದಕ್ಕೆ ನಾನು ಹೇಳಿದೆ, ಈಗ ನಡೆಯುತ್ತಿರುವ ವಿಧಾನಸಭಾಧಿವೇಶನ ಮುಗಿದ ನಂತರ ಅಲ್ಲಿನ ಶಾಸಕರು ಮತ್ತಿತರನ್ನು ಸೇರಿಸಿ ಅಲ್ಲಿ ಒಂದು ಸಭೆ ಮಾಡೋಣ, ಅದರಲ್ಲಿ ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಿ ನಿಜವಾಗಿ ಏನು ತೊಂದರೆಯಾಗಿದೆ ಎಂಬುದನ್ನು ನೋಡಿ ಪರಿಹಾರ ಮಾಡೋಣ, ಯಾರು ಪೂರ್ತಿಯಾಗಿ ನಿರ್ಗತಿಕರಾಗಿದ್ದಾರೆ, ಯಾರಿಗೆ ಕೊಡುವುದಕ್ಕೆ ಸಾಧ್ಯವೇ ಇಲ್ಲ, ಯಾರಿಗೆ ಸಾಧ್ಯತೆ ಇದೆ, ಇದೆಲ್ಲವನ್ನೂ ಪರಿಶೀಲನೆ ಮಾಡೋಣ ಎಂಬ ಆಶ್ವಾಸನೆಯನ್ನು ಮಾನ್ಯ ಸದಸ್ಯರಾದ ಪಾಟೀಲ್ ಅವರು ಮತ್ತಿತರ ಸ್ನೇಹಿತರು ಬಂದಾಗ ಹೇಳಿದ್ದೆ. ಕಳೆದ ೧೫ ದಿವಸದ ಹಿಂದೆ ಮಾನ ಬಿ. ಆರ್. ಪಾಟೀಲರು ಬಂದು ರೈತರು ಉಪವಾಸ ಕುಳಿತಿದ್ದಾರೆ ಎಂದು ಹೇಳಿದಾಗ ನಾನು ಹೇಳಿದೆ ನೀವು ಹೋಗಿ ಹೇಳಿ. ಇದು ಒಂದು ದಿನದ ಸಮಸ್ಯೆಯಲ್ಲ, ಅಥವಾ ಒಂದು ವರ್ಷದ ಸಮಸ್ಯೆಯಲ್ಲ, ಅನೇಕ ವರ್ಷಗಳಿಂದ ಬೆಳೆದುಕೊಂಡು ಬಂದಿದೆ ಅನೇಕ ವರ್ಷಗಳಿಂದ ಸಂಬಂಧಪಟ್ಟವರು ಒಂದಲ್ಲ ಒಂದು ರೀತಿಯಲ್ಲಿ ಆಶ್ವಾಸನೆ ಕೊಡುತ್ತಿದ್ದಾರೆ, ಅದು ಈಡೇರದೇ ಇರಬಹುದು, ಆದರೆ ಅಸೆಂಬ್ಲಿ ಅಧಿವೇಶನ ಮುಗಿದ ಮೇಲೆ ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ತೊಂದರೆಯಾಗಿದ್ದರೆ ಪರಿಹಾರ ಮಾಡುತ್ತೇವೆ ಎಂದು ಹೋಗಿ ಭರವಸೆ ಕೊಡಿ ಎಂದು ಹೇಳಿ ಉಪವಾಸ ಕೈಬಿಡುವಂತೆ ಕೇಳಿಕೊಳ್ಳಿ ಎಂದೂ ಹೇಳಿದೆ. ಅವರು ಉಪವಾಸ ಕುಳಿತುಕೊಳ್ಳುವುದರಿಂದ ಸರ್ಕಾರಕ್ಕೆ ಯಾವ ರೀತಿಯಲ್ಲೂ ಸಹಾಯ ಮಾಡಿದಂತಾಗುವುದಿಲ್ಲ ಆದ್ದರಿಂದ ಉಪವಾಸದಿಂದ ಎದ್ದೇಳುವಂತೆ ಹೇಳಿ ಎಂದು ಪಾಟೀಲರಿಗೆ ಹೇಳಿದೆ. ಇವರೂ ಕೂಡ ಅಲ್ಲಿ ಹೇಳಿ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದರು. ನಂತರ ಕೆಲವು ಜನರು ಹೌದು ಮುಖ್ಯಮಂತ್ರಿಗಳೇ ಬಂದು ತೀರ್ಮಾನ ಮಾಡಲಿ ಅಲ್ಲಿಯವರೆಗೂ ಯಾವುದೇ

ತ್ರವುವನ್ನೂ ತೆಗೆದುಕೊಳ್ಳುವುದು ಬೇಡ ಎಂದು ಹೇಳಿದರು ಇನ್ನು ಕೆಲವು ಜನರು ಇದನ್ನು ಒಪ್ಪು ವುದು ಬೇಡ, ಉಪವಾಸ ಸತ್ಯಾಗ್ರಹವನ್ನು ಮುಂದುವರೆಸಿಕೊಂಡು ಹೋಗೋಣ ಎಂದು ಹೇಳಿದರೆಂದು ಗೊತ್ತಾಯಿತು. ಮಾನ್ಯ ಪಾಟೀಲರೂ ಬಂದು ಕೆಲವರು ಉಪವಾಸ ಸತ್ಯಾಗ್ರಹ ಕೈಬಿಡುವುದಕ್ಕೆ ಒಪ್ಪಿ ದರೂ ಕೂಡ ಇನ್ನು ಕೆಲವರು ಮುಂದುವರೆಸಿಕೊಂಡು ಹೋಗಬೇಕು ಎಂದು ಹೇಳುತ್ತಿದ್ದಾರೆ ಎಂದು ಹೇಳಿದರು. ಅದಾದನಂತರ ನಿನ್ನೆ ದಿವಸ ಈ ಘಟನೆ ನಡೆದಿದೆ. ಯಾವುದೇ ತರಹದ ಅಶಾಂತಿ ವಾತಾ ವರಣಕ್ಕೆ ನಾವು ಅವಕಾಶ ಕೊಡುವುದಿಲ್ಲ. ತಹಸೀಲ್ದಾರರ ಹತ್ತಿರ ಹೋಗಿ ಬರೀ ಮೆಮೋರಾಂಡವಂ ಕೊಡುತ್ತೇವೆ. ನಂತರ ಸಭೆ ನಡೆಸಿ ಬೆಂಗಳೂರಿಗೆ ಹೋಗಿ ಮುಖ್ಯಮಂತ್ರಿಗಳನ್ನು ಮತ್ತು ಇತರ ಸಂಬಂಧ ಪಟ್ಟವರನ್ನು ಕಂಡು ಮನವಿ ಅರ್ಪಿಸಿ ಬರುತ್ತೇವೆ ಎಂದು ಮೊದಲೇ ಅವರು ಪೋಲೀಸರಿಗೆ ಬರೆದು ಕೊಟ್ಟಿದ್ದಾರೆ ಯಾವುದೇ ತರಹದ ಅಹಿತಕರ ಘಟನೆಗೆ ಅವಕಾಶ ಕೊಡುವುದಿಲ್ಲ ಎಂಬ ಆಶ್ವಾಸನೆಯನ್ನು ಅಧಿಕಾರಿಗಳಿಗೆ ಕೊಟ್ಟಿದ್ದರಿಂದ ಪೋಲೀಸರು ತಹಸೀಲ್ದಾರರ ಕಚೇರಿಯಲ್ಲಿ ಕುಳಿತುಕೊಂಡು ಮೆರವಣಿಗೆ ಯಲ್ಲಿ ಬಂದು ಮನವಿ ಅರ್ಪಿಸುತ್ತಾರೆ ಎಂದು ಕಾಯುತ್ತಿದ್ದರು. ಪೋಲೀಸರು ತಹಸೀಲ್ದಾರರ ಕಚೇರಿಗೆ ಬಂದ ಸ್ವಲ್ಪ ಹೊತ್ತಿನಲ್ಲಿ ಮೆರವಣಿಗೆಯಲ್ಲಿ ಬಂದವರು ಕಲ್ಲೆಸೆಯುವುದಕ್ಕೆ ಪ್ರಾರಂಭ ಮಾಡಿದರು. ಕಲ್ಲೆಸೆಯುವುದು ಒಂದು ಕಡೆಯಾದರೆ ಇನ್ನೊಂದು ಕಡೆ ಪ್ರದರ್ಶನಕಾರರು ತಹಸೀಲ್ದಾರರ ಕಚೇರಿಗೆ ಬಲವಂತವಾಗಿ ಪ್ರವೇಶ ಮಾಡುವುದಕ್ಕೆ ಬಂದರು. ಅಲ್ಲಿದ್ದಂಥ ಕೆಲವೇ ಪೋಲೀಸರು ಒಳಗೆ ಬರಬೇಡಿ ಎಂದು ಬಲವಂತವಾಗಿ ತಡೆದು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿದರು.

೭-೦೦ ಪಿ.ಎಂ.

ಅಷ್ಟು ಹೊತ್ತಿಗೆ ಅವರ ಸಂಖ್ಯೆ ಜಾಸ್ತಿಯಾಗುತ್ತಾ ಬಂತು. ತಹಶೀಲ್ದಾರರ ಕಛೇರಿಗೆ ಮೊದಲಂ ಬಂದವರ ಸಂಖ್ಯೆ ನೂರು-ಇನ್ನೂರು ಆದರೆ ಅದು ಬರುಬರುತ್ತಾ ಸಾವಿರಾರು ಆಯಿತು ಆ ಗುಂಪು ಪೋಲಿಸರ ಮಾತನ್ನು ಕೇಳದೆ ತಹಶೀಲ್ದಾರ್ ಕಛೇರಿಯ ಹಿಂಬಾಗಿಲನ್ನು ಮುರಿದು ಒಳಗೆ ನುಗ್ಗಿತು. ನಾನು ಮೊದಲೇ ಹೇಳಿದ ಹಾಗೆ, ಪೋಲಿಸರು ಲಾಠಿ ಚಾರ್ಜ್ ಮಾಡಿದರೂ ಏನು ಪ್ರಯೋಜನವಾಗ ಲಿಲ್ಲ. ಆಗ ಸಬ್ ಇನ್‌ಸ್ಪೆಕ್ಟರ್ ದಾರಿ ಕಾಣದೆ ತನ್ನ ಆತ್ಮ ರಕ್ಷಣೆಗಾಗಿ ಒಂದು ಸುತ್ತು ಗುಂಡನ್ನು ಹಾರಿಸಿದಾಗ ಆತನನ್ನು ಎಳೆದುಕೊಂಡು, ಆತನ ಬಳಿಯಿದ್ದ ರಿವಾಲ್ವರ್ ಅನ್ನು ಕಸಿದುಕೊಂಡು, ಆ ಸ್ಥಳದಲ್ಲೇ ಅವನನ್ನು ಕೊಂದಿದ್ದಾರೆ. ಇಂದು ಬೆಳಿಗ್ಗೆ ಮಾನ್ಯ ಸದಸ್ಯರನೇಕರು ಮಾತನಾಡಿದ ಪ್ರಕಾರ ವಿಷಯವೇನಿತ್ತು ಎಂದರೆ, ಬಹಳವಾಗಿ ರೈತರ ಮೇಲೆ ದಬ್ಬಾಳಿಕೆ ನಡೆದು ಹೋಗಿದೆ, ರೈತರಿಗೆ ಬಹಳ ಅನ್ಯಾಯವಾಗಿದೆ ಎಂದು ಹೇಳುತ್ತಾ ಮಧ್ಯದಲ್ಲಿ ಇಬ್ಬರ ಪೋಲಿಸ್ ಅಧಿಕಾರಿಗಳೂ ಸತ್ತುಹೋಗಿದ್ದಾರೆ ಎಂದು ಸಹಾನುಭೂತಿ ವ್ಯಕ್ತಪಡಿಸಿದರು. ಸರ್ಕಾರ ರೈತರನ್ನು ಬಹಳ ನಿರ್ಲಕ್ಷ್ಯತನದಿಂದ ಕಂಡಿದೆ, ರೈತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಇದ್ದದ್ದರಿಂದ ಈ ಪ್ರಸಂಗ ನಡೆದಿದೆ ಎನ್ನುವ ಅರ್ಥ ಬರುವ ರೀತಿ ಕೆಲವು ಮಾನ್ಯ ಸದಸ್ಯರುಗಳು ಮಾತನಾಡಿದರು. ಇಂತಹ ಮೆರವಣಿಗೆ ಮತ್ತಿತರ ಸಂದರ್ಭಗಳಲ್ಲಿ ಗಲಾಟೆಗಳಾದಾಗ ಪೋಲಿಸರ ಪ್ರಚೋದನೆ ಅಥವಾ ಪೋಲಿಸರ ಮಿತಿಮೀರಿದ ವರ್ತನೆಯಿಂದ ಆ ರೀತಿ ಯಾಯಿತೆಂದು ಸ್ವಾಭಾವಿಕವಾಗಿ ಟೀಕೆಗಳು ಬರುತ್ತವೆ ಆದರೆ, ಈ ಘಟನೆಯಲ್ಲಿ ಯಾವ ಹಂತದಲ್ಲೂ ಪೋಲಿಸರ ಪ್ರಚೋದನೆ ಇತ್ತೆಂದು ಮಾನ್ಯ ಸದಸ್ಯರು ಹೇಳಿಲ್ಲ. ಜೊತೆಗೆ ಸರ್ಕಾರಕ್ಕೆ ಬಂದಿರುವ ಪೂರ್ಣ ವಿವರಗಳ ಪ್ರಕಾರವೂ ಅಲ್ಲಿ ಪೋಲಿಸರಿಂದ ಯಾವುದೇ ರೀತಿಯ ಪ್ರಚೋದನೆಯಾಗಿಲ್ಲ. ಜನರ ಮನವಿ ಯನ್ನು ಕೇಳಿಕೊಂಡು ಅವರನ್ನು ಕಳುಹಿಸಿಕೊಡಬೇಕೆಂದು ಪೋಲಿಸರು ಪ್ರಯತ್ನ ಮಾಡುತ್ತಿದ್ದಾಗ, ಆ ಜನರ ಗುಂಪಿನಲ್ಲೇ ಇದ್ದ ಕೆಲವರ ಪ್ರಚೋದನೆಯಿಂದ ಇಷ್ಟೊಂದು ಗಲಾಟೆಗೆ ಅವಕಾಶವಾಯಿತೇ ಹೊರತು ಪೋಲಿಸರ ಕಡೆಯಿಂದ ಪ್ರಚೋದನೆಯಾಗಿಲ್ಲ. ಪೋಲಿಸರು ತಮ್ಮ ಆತ್ಮ ರಕ್ಷಣೆಗಾಗಿ ಗುಂಡು ಹಾರಿಸಿದಾಗ ಒಬ್ಬ ಸಬ್ ಇನ್‌ಸ್ಪೆಕ್ಟರ್ ಸ್ಥಳದಲ್ಲೇ ಜನರಿಂದ ಪ್ರಾಣ ನೀಗಿದ್ದಾನೆ. ಇದರ ಜೊತೆಗೆ, ಬೇರೆ ಬೇರೆ ಹಂತಗಳಲ್ಲಿ ಮೂರು ಜನರು ತೀರಿ ಹೋಗಿದ್ದಾರೆ. ಇನ್ನೂ ಇಬ್ಬರ ಸ್ಥಿತಿ ಚಿಂತಾಜನಕ ವಾಗಿದೆ. ಈ ಘಟನೆ ಬಗ್ಗೆ ನ್ಯಾಯಾಂಗ ವಿಚಾರಣೆ ಮಾಡಬೇಕೆಂದು ಅನೇಕ ಮಾನ್ಯ ಸದಸ್ಯರುಗಳು ಕೇಳುತ್ತಿದ್ದಾರೆ. ಶ್ರೀನಿವಾಸಪುರದ ಘಟನೆ ಚರ್ಚೆಗೆ ಬಂದಾಗಲೇ ಗೋಳಿಬಾರ್ ಆದ ಸಂದರ್ಭಗಳಲ್ಲೆಲ್ಲ ನ್ಯಾಯಾಂಗ ತನಿಖೆ ಮಾಡಿಸಿರುವುದು ಸ್ವಾಭಾವಿಕ; ಆದುದರಿಂದ, ಶ್ರೀನಿವಾಸಪುರದ ಘಟನೆ ಸಂಬಂಧ ವಾಗಿಯೂ ನ್ಯಾಯಾಂಗ ತನಿಖೆ ಮಾಡಿಸಿ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ನಾನು ಆಗ, ಗೋಳಿಬಾರ್ ಆದ ಸಂದರ್ಭಗಳಲ್ಲೆಲ್ಲ ಪ್ರಕರಣಗಳನ್ನು ನ್ಯಾಯಾಂಗ ತನಿಖೆಗೆ ಒಳಪಡಿಸು

ವುದಿಲ್ಲ; ಒಳಪಡಿಸಿಲ್ಲ ಎಂದು ಹೇಳಿದೆ. ಗೋಳಿಬಾರ್ ಆದರೂ ಪ್ರಕರಣಗಳನ್ನು ನ್ಯಾಯಾಂಗ ತನಿಖೆಗೆ ಒಳಪಡಿಸದ ಅನೇಕ ಸಂದರ್ಭಗಳಿವೆ. ಉದಾಹರಣೆಗೆ ಹೇಳುವುದಾದರೆ ೧೯೭೬ ನೇ ಇಸವಿಯಲ್ಲಿ ನಮ್ಮ ರಾಜ್ಯದಲ್ಲಿ ಐದು ಸಲ ಪೋಲಿಸರಿಂದ ಗೋಳಿಬಾರ್ ಆಗಿದೆ ಮತ್ತು ಗೋಳಿಬಾರ್‌ನಿಂದ ಜನ ಸತ್ತಿದ್ದಾರೆ. ಆಗ ಯಾವ ಪ್ರಕರಣಕ್ಕೂ ನ್ಯಾಯಾಂಗ ವಿಚಾರಣೆಯಾಗಿಲ್ಲ. ೧೯೭೭ ನೇ ಇಸವಿಯಲ್ಲಿ ಪುನಃ ಐದು ಸಲ ಗೋಲಿಬಾರ್ ಆದಾಗಲೂ ಯಾವುದೇ ರೀತಿಯ ನ್ಯಾಯಾಂಗ ತನಿಖೆಯಾಗಿಲ್ಲ. ೧೯೭೮ ನೇ ಇಸವಿಯಲ್ಲಿ ನಮ್ಮ ರಾಜ್ಯದಲ್ಲಿ ಇಪ್ಪತ್ತೊಂರು ಸಲ ಗೋಳಿಬಾರ್ ನಡೆಸಿದ ಪ್ರಕರಣಗಳಿವೆ. ಆಗ ಇಂತಹ ಪರಿಸ್ಥಿತಿ ಕೂಡ ಇತ್ತು. ಆಗ ಆರು ಸಲ ಮಾತ್ರ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಲಾಗಿದೆ. ೧೯೭೯ ನೇ ಇಸವಿಯಲ್ಲಿ ಹನ್ನೆರಡು ಸಲ ಗೋಳಿಬಾರ್ ಆಗಿದೆ. ಅದರಲ್ಲಿ ಎರಡು ಪ್ರಕರಣಗಳಿಗೆ ಮಾತ್ರ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಲಾಗಿದೆ. ಗೋಳಿಬಾರ್ ಆದಾಗಲೆಲ್ಲ ನ್ಯಾಯಾಂಗ ತನಿಖೆಯಾಗಬೇಕೆಂಬ ಸಂಪ್ರದಾಯವಿಲ್ಲವೆಂಬುದನ್ನು ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರಲು ನಾನು ಈ ಅಂಕಿ–ಅಂಶಗಳನ್ನು ಹೇಳುತ್ತಿದ್ದೇನೆ. ನಮ್ಮ ರಾಜ್ಯದಲ್ಲೇ ಅಲ್ಲ. ಬೇರೆ ರಾಜ್ಯಗಳಲ್ಲೂ ಸಹ ಇಂತಹ ಸಂದರ್ಭಗಳು ಅನೇಕ ಸಾರಿ ನಡೆದಿವೆ. ೧೯೭೭ ಮತ್ತು ೭೮ ನೇ ಇಸವಿಯಲ್ಲಿ ತಮಿಳುನಾಡಿನಲ್ಲಿ. ನಮ್ಮ ರಾಜ್ಯದಲ್ಲಿ ನಡೆದಿರುವುದಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ರೈತರ ಚಳವಳಿ ನಡೆಯಿತು. ಆಗ ಅಲ್ಲಿ ಹದಿನೆಂಟು ಸಲ ಗೋಳಿಬಾರ್ ಆಗಿ ೨೨ ಜನ ಸತ್ತುಹೋದರು. ಅಂತಹ ಸಂದರ್ಭಗಳಲ್ಲೂ ಒಂದೇ ಒಂದು ಪ್ರಕರಣದಲ್ಲಿ ಜಿಲ್ಲಾ ನ್ಯಾಯಾಧೀಶರಿಂದ ನ್ಯಾಯಾಂಗ ವಿಚಾರಣೆ ನಡೆಸಿದರೆ ಹೊರತು ಎಲ್ಲಾ ಪ್ರಕರಣಕ್ಕೂ ಸಂಬಂಧಿಸಿದಂತೆ ನ್ಯಾಯಾಂಗ ವಿಚಾರಣೆ ನಡೆಸಿಲ್ಲ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ನಮ್ಮ ರಾಷ್ಟ್ರದಲ್ಲಾಗಲೀ ಅಥವಾ ನಮ್ಮ ರಾಜ್ಯದಲ್ಲಾಗಲೀ, ಕಾನೂನು ಮತ್ತು ಶಿಸ್ತುಪಾಲನೆ ಮಾಡಬೇಕಾದರೆ ಕೆಲವು ಸಂದರ್ಭಗಳಲ್ಲಿ ಅನಿವಾರ್ಯವಾಗಿ ಪೋಲಿಸರು ಗೋಳಿಬಾರ್ ಮಾಡಬೇಕಾಗುತ್ತದೆ. ಮಾನ್ಯ ಕಕ್ಕಿಲಾಯ ಅವರು ಭಾಷಣ ಮಾಡುತ್ತಾ, ''ಪೋಲಿಸರು ಈ ರೀತಿ ಲಾಠಿ ಚಾರ್ಜ್ ಮಾಡುವುದಕ್ಕಾಗಿಯೇ ಇದ್ದಾರೆಂದು'' ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿ ಹೇಳಿದರೆಂದು ತಿಳಿಸಿದರು. ವರದಿ ತರಿಸಿ ನೋಡಿದರೆ ನಾನು ಏನು ಹೇಳಿದೆ ಎನ್ನುವುದು ಗೊತ್ತಾಗುತ್ತದೆ. ನಾನು ಹೇಳಿದ್ದೇನೆಂದರೆ, ವಿಧಾನ ಸೌಧದ ಮುಂದಾಗಲೀ, ಜಾತ್ರೆ ಸಮಾರಂಭದಲ್ಲಾಗಲೀ ಅಥವಾ ಹಬ್ಬ ಹರಿದಿನಗಳಲ್ಲಾಗಲೀ ಅಥವಾ ರೈತರ ಅಥವಾ ಕಾರ್ಮಿಕರ ಸಮ್ಮೇಳನಗಳಲ್ಲಾಗಲೀ, ಮೇಲ್ಮಟ್ಟದ ಅಧಿಕಾರಿ ಲಾಠಿ ಚಾರ್ಜ್ ಮಾಡಲು ಒಂದು ಸಲ ಆಜ್ಞೆ ಕೊಟ್ಟಾದ ಮೇಲೆ, ಅಲ್ಲಿಗೆ ನಾನು ಹೋದರೂ ಹೊಡೆಯುತ್ತಾರೆ. ನೀವು ಹೋದರೂ ಹೊಡೆಯುತ್ತಾರೆ, ಇನ್ನೊಬ್ಬರು ಹೋದರೂ ಹೊಡೆಯುತ್ತಾರೆ; ಲಾಠಿ ಚಾರ್ಜ್ ಮಾಡಲು ಆಜ್ಞೆ ಕೊಟ್ಟವನು ಸಮವಸ್ತ್ರವಿಲ್ಲದೆ ಅಲ್ಲಿಗೆ ಹೋದರೆ ಅವನನ್ನೂ ಹೊಡೆಯುತ್ತಾರೆ. ಈ ಮಾತನ್ನು ನಾನು ಈಗಲೂ ಹೇಳುತ್ತೇನೆ. ನಾಳೆಯೂ ಹೇಳುತ್ತೇನೆ. ಸತ್ಯ ಹೇಳುವುದಕ್ಕೆ ನಾವು ಯಾವಾಗಲೂ ಭಯಪಡಬೇಕಾಗಿಲ್ಲ; ಯಾರಿಗೂ ಭಯಪಡಬೇಕಾಗಿಲ್ಲ ಮೀಸಲು ಪೋಲಿಸ್ ಪಡೆಯನ್ನು ತಯಾರು ಮಾಡಿರುವುದೇ ಅದಕ್ಕೋಸ್ಕರ. ಕೇರಳದಲ್ಲಿ ಶ್ರೀ ನಂಬೂದಿರಿಪಾಡ್ ಅವರ ಸರ್ಕಾರವಿದ್ದಾಗ, ಇಡೀ ಇಂಡಿಯಾ ದೇಶದಲ್ಲಿ ಯಾರೂ ಮಾಡಿಸದಷ್ಟು ಗೋಳಿಬಾರ್ ಕೇರಳದಲ್ಲಿ ಆಯಿತು. ಗೋಳಿಬಾರ್ ಮಾಡಿದ್ದು ತಪ್ಪು ಎಂದು ನಾನು ಹೇಳುತ್ತಿಲ್ಲ ಯಾವುದೇ ಪಕ್ಷ ಅಧಿಕಾರದಲ್ಲಿರಲಿ, ಯಾವುದೇ ಒಬ್ಬ ವ್ಯಕ್ತಿ ಅಧಿಕಾರದಲ್ಲಿರಲಿ ರಾಷ್ಟ್ರ ಅಥವಾ ರಾಜ್ಯದಲ್ಲಿ ಶಾಂತಿ ಮತ್ತು ಶಿಸ್ತುಪಾಲನೆ ಮಾಡುವ ಸಂದರ್ಭದಲ್ಲಿ ಲಾಠಿ ಚಾರ್ಜ್ ಮಾಡಬೇಕಾಗುತ್ತದೆ; ಗೋಳಿಬಾರ್ ಕೂಡ ಮಾಡಬೇಕಾಗುತ್ತದ. ಮಾಡಿದ್ದಾರೆ. ಇವತ್ತು ಬಂಗಾಳದಲ್ಲಿ ಏನಾಗುತ್ತಿದೆ ? ಮಾನ್ಯ ಕಕ್ಕಿಲಾಯ ಅವರು ನಾಳೆ ದಿವಸ ಗೃಹಮಂತ್ರಿಯಾಗಿ ಬಂದರೂ, ನೀವು ಮಾಡುವುದೂ ಇಷ್ಟೆ. ಬಹುಶಃ ನೀವಿನ್ನೂ ಜಾಸ್ತಿ ಮಾಡುತ್ತೀರೇನೋ ? ಏಕೆಂದರೆ, ತಮ್ಮ ಪಕ್ಷದ ನೀತಿಯನ್ನು ನಾನು ಓದಿದ್ದೇನೆ. ಆದುದರಿಂದ, ತಮಗಿದನ್ನು ಹೇಳುತ್ತಿದ್ದೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ನಾನು ಹೇಳಿದ್ದು : ''ತಾವು ಆಜ್ಞೆ ಕೊಟ್ಟಾಗ ಯಾರು ಬಂದರೂ ಹೊಡೆಯುತ್ತಾರೆ'' ಎಂದಲ್ಲ. ತಾವು ಅವತ್ತಿನ ದಿವಸ, ಅಂದರೆ, ಕೋಲಾರದಿಂದ ಇಲ್ಲಿಗೆ ಬಂದವರ ಮೇಲೆ ಲಾಠಿ ಚಾರ್ಜ್ ಮಾಡಿ ಅವರನ್ನು ಹೊಡೆದದ್ದರ ಬಗ್ಗೆ ಈ ಸದನದಲ್ಲಿ ಮಾತನಾಡುವ ಸಂದರ್ಭದಲ್ಲಿ, ''ಪ್ರಧಾನ ಮಂತ್ರಿಯವರು ಬಂದರೂ ಹೊಡೆಯುತ್ತಾರೆ, ಮುಖ್ಯ ಮಂತ್ರಿಗಳು ಬಂದರೂ ಹೊಡೆಯುತ್ತಾರೆ, ನಿಮಗೂ ಹೊಡೆಯುತ್ತಾರೆ'' ಎಂದಿರಿ. ಆದರೆ, ಅವತ್ತು ಲಾಠಿ ಚಾರ್ಜ್ ಮಾಡಲಿಕ್ಕೆ ಆಜ್ಞೆ ಕೊಟ್ಟಿದ್ದಿಲ್ಲ. ಅಲ್ಲಿ ಯಾವ ಪ್ರಚೋದನೆಗೂ ಅವಕಾಶವಿರಲಿಲ್ಲ. ಯಾವುದೇ ಪಕ್ಷವಾಗಲೀ ಅಥವಾ ಯಾವುದೇ ಸರ್ಕಾರವಾಗಲೀ, ಪೋಲಿಸರು ಈ ರೀತಿ ಮಾಡುವುದು ನ್ಯಾಯವೆಂಬ ಭಾವನೆ

ಬರುವ ಹಾಗೆ ಒಬ್ಬ ಮುಖ್ಯ ಮಂತ್ರಿಗಳು ಹೇಳಿದರೆ ಇದರಿಂದ ಜನರಿಗೆ ಬಹಳ ನಿರಾಶೆಯಾಗುತ್ತದೆಂದು ಮಾತ್ರ ನಾನು ಹೇಳಿದೆ.

ಶ್ರೀ ಆರ್. ಗುಂಡೂರಾವ್.—ಸತ್ಯವನ್ನು ಯಾರೂ ಮುಚ್ಚಿಡುವುದಕ್ಕಾಗುವುದಿಲ್ಲ. ನಾನು ಮುಚ್ಚಿಡುವುದಕ್ಕಾಗುವುದಿಲ್ಲ; ನೀವೂ ಮುಚ್ಚಿಡುವುದಕ್ಕಾಗುವುದಿಲ್ಲ; ಇದೇ ಕೇರಳದಲ್ಲಿ ಮನ್ನಾತ ಪದ್ಮನಾಭನ್ ಕಾಲದಲ್ಲಿ ಚಳಚಳಿ ನಡೆಯಿತು. ಆಗ ಎಷ್ಟು ಬಾರಿ ಗೋಳಿಬಾರ್ ಆಯಿತು ಮತ್ತು ಎಷ್ಟು ಜನ ಸತ್ತರು ಎನ್ನುವುದನ್ನು ನಾಳೆ ಬೇಕಾದರೆ ಇಡುತ್ತೇನೆ. ಕೇರಳ ವಿಧಾನ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದಾಗ ಆಗಿನ ಮುಖ್ಯ ಮಂತ್ರಿಗಳು ಪೋಲಿಸ್ ಇಲಾಖೆ ಬಗ್ಗೆ ಏನು ಹೇಳಿದ್ದಾರೆಂಬುದನ್ನು ತಮ್ಮ ಅವಗಾಹನೆಗೆ ತರಲು ಬೇಕಾದರೆ ಸಭೆಯ ನಡವಳಿಕೆಯನ್ನೇ ತಂದು ಇಡುತ್ತೇನೆ. ಇದನ್ನೇನೂ ಹೆಚ್ಚುಗಾರಿಕೆ ಎಂದು ನಾನು ಹೇಳುತ್ತಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಕಕ್ಕಿಲಾಯ ಅವರ ಮುಖ್ಯ ಮಂತ್ರಿಗಳು ಮಾಡಿದ್ದು ನಮಗೆ ಆದರ್ಶವಲ್ಲ !

ಶ್ರೀ ಆರ್. ಗುಂಡೂರಾವ್.—ಆದರ್ಶದ ಪ್ರಶ್ನೆ ಇಲ್ಲಿ ಬರುವುದಿಲ್ಲ. ಅಧಿಕಾರದಲ್ಲಿ ಇದ್ದವರು ಮಾಡಿದ್ದೆಲ್ಲ ಆದರ್ಶವಾಗುವುದಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—೧೯೫೭ನೇ ಇಸವಿಯಲ್ಲಿ ಶ್ರೀ ನಂಬೂದರಿಪಾಡ್ ಅವರು ಇದಕ್ಕಾಗಿಯೇ ರಾಜೀನಾಮೆ ಕೊಟ್ಟ ದಾಖಲೆ ಇದೆ.

†ಶ್ರೀ ಆರ್. ಗುಂಡೂರಾವ್. — ತಾವು ಮಾತನಾಡುವಾಗ ನಾನು ಉಸಿರು ಬಿಡಲಿಲ್ಲ. ಸುಮ್ಮನೆ ಕುಳಿತಿದ್ದೆ. ತಾವು ಹೇಳುವುದು ತಮ್ಮ ಅಭಿಪ್ರಾಯ. ಅದು ತಮ್ಮ ನಿಲುವು. ಅದಕ್ಕೆ ನಾನು ಅಡ್ಡ ಬರಲಾರೆ. ತಾವು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು. ಆದರೆ, ನಾನು ಮಾತನಾಡುವಾಗ ತಾವು ಮಧ್ಯೆ ಮಾತನಾಡಬೇಡಿ. ಈಗ ನಾನು ಹೇಳುವುದನ್ನಾದರೂ ಒಪ್ಪುತ್ತೀರಲ್ಲ? ಅವರು ರಾಜೀನಾಮೆ ಕೊಟ್ಟಿದ್ದು ಬೇರೆ ಮಾತು. ರೈತರಿಗೆ ಬಹಳ ಅನ್ಯಾಯವಾಗಿದೆ ಎಂದು ಅನೇಕ ಸದಸ್ಯರು ಹೇಳಿದ್ದಾರೆ; ರೈತರ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಕಳೆದ ಹತ್ತು ವರ್ಷಗಳಿಂದೇನು ರೈತರಿಗೆ ಅನ್ಯಾಯವಾಗಿಲ್ಲ ಅಥವಾ ಐದು ವರ್ಷಗಳಿಂದೇನು ಅನ್ಯಾಯವಾಗಿಲ್ಲ. ಸ್ವಾತಂತ್ರ್ಯ ಬಂದನಂತರದ ಮೂವತ್ತು ವರ್ಷಗಳಲ್ಲಿ ರೈತರಿಗೆ ಬೇಕಾದಷ್ಟು ಅನ್ಯಾಯವಾಗಿದೆ ಎಂದು ಎಲ್ಲರೂ ಸ್ಪಷ್ಟವಾಗಿ ಹೇಳಿದ್ದಾರೆ. ಅವರಲ್ಲೂ ನಮ್ಮ ರಾಜ್ಯದಲ್ಲಿ, ಹುಟ್ಟುವಾಗಲೇ ನೇಗಿಲನ್ನು ಹೆಗಲಮೇಲೆ ಹೊತ್ತುಬಂದ ಅನೇಕ ಜನರು ಮುಖ್ಯ ಮಂತ್ರಿಗಳಾಗಿದ್ದರು. ಅವರು ರೈತರ ಬಗ್ಗೆ ಕನಿಕರಪಟ್ಟಂತೆ ಕಾಣಲಿಲ್ಲ. ಅವರೆಲ್ಲ ರೈತರ ಸಮಸ್ಯೆಗಳನ್ನು ಸರಿ ಮಾಡಿದ್ದರೆ ಈ ಪ್ರಶ್ನೆ ಬರುತ್ತಲೇ ಇರಲಿಲ್ಲ. ಅಂದರೆ, ಇವತ್ತು ಇವರ್ಯಾರೂ ಭಾಷಣ ಮಾಡುತ್ತಾ ಇರಲಿಲ್ಲ. ಇವತ್ತು ಏನಾಗಿದೆ ಎಂದರೆ, ಎಲ್ಲರೂ ಸಹ, ನಾವು ಹಳ್ಳಿಗಳಿಂದ ಬಂದವರು. ನಾವೆಲ್ಲ ರೈತರ ಮಕ್ಕಳು, ರೈತ ಈ ದೇಶದ ಬೆನ್ನೆಲುಬು ಎಂದು ಹೇಳುತ್ತಾರೆ. ರೈತರ ಬಗ್ಗೆ ಗೊತ್ತಿಲ್ಲದೆ ಇರುವವರು ಅಥವಾ ಹಳ್ಳಿಯ ಬಗ್ಗೆ ಜ್ಞಾನವಿಲ್ಲದವರು ಇಲ್ಲಿ ಇಲ್ಲವೇ ಇಲ್ಲವೆಂದು ಹೇಳಬಹುದು. ನಾವೆಲ್ಲ ರೈತರ ಮಕ್ಕಳಾಗಿ ಹುಟ್ಟಿ, ಬಡವರ ಮಕ್ಕಳಾಗಿ ಹುಟ್ಟಿ, ಹಳ್ಳಿಗಳಲ್ಲಿ ವ್ಯವಸಾಯ ಮಾಡಿ, ಇಂದು ಎಲ್ಲ ಹಂತಗಳಲ್ಲೂ ಅಧಿಕಾರದಲ್ಲಿದ್ದರೂ ಸಹ ರೈತ ಮಾತ್ರ ಏತಕ್ಕೆ ಇದ್ದಂಥ ಸ್ಥಿತಿಯಲ್ಲೇ ಇದ್ದಾನೆ? ಇದು ಚರ್ಚಾಸ್ಪದವಾದ ವಿಚಾರ. ಒಂದೆರಡು ಗಂಟೆಗಳಲ್ಲಿ ಚರ್ಚೆ ಮಾಡಿ ಮುಗಿಸುವ ವಿಚಾರವಲ್ಲ ಇದು. ಬೆಲೆ ಏರಿಕೆ ಬಗ್ಗೆ ಮೆರವಣಿಗೆ ಮಾಡಿದ್ದಾರೆ. ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಅದರ ಬಗ್ಗೆ ಅನೇಕ ಬಾರಿ ಈ ಸದನದಲ್ಲಿ ಚರ್ಚೆ ನಡೆದಿದೆ. ಇಂದು ಸಭೆಯಲ್ಲಿ ಮಾನ್ಯ ಕಂದಾಯ ಸಚಿವರು ಉತ್ತರ ನೀಡುವಾಗ, ಮಾನ್ಯ ವಿರೋಧ ಪಕ್ಷದ ನಾಯಕರು ಸಾಕಷ್ಟು ವಿವರಣೆ ಕೊಟ್ಟರು. ಇವತ್ತು ನಡೆಯುತ್ತಿರುವ ವಿಷಯವಲ್ಲ ಇದು; ಕಳೆದ ವರ್ಷದ ವಿಷಯವೂ ಅಲ್ಲ. ಈ ಮಾತು ಪ್ರತಿ ವರ್ಷವೂ ಕೇಳಿ ಬರುತ್ತಿದೆ. ಈ ರಾಜ್ಯದಲ್ಲಿ ಬೆಳೆಯುವವನಿಗೆ ಸರಿಯಾದ ಕ್ರಯ ಸಿಗುತ್ತಿಲ್ಲ. ಇವತ್ತು ಅವನ ಸ್ಥಿತಿ ಚಿಂತಾಜನಕವಾಗಿದೆ. ಬೆಳೆಯುವವನಿಗೂ ಸಿಗುತ್ತಿಲ್ಲ ಮತ್ತು ಕೊಂಡುಕೊಳ್ಳುವವನಿಗೂ ಸಿಗುತ್ತಿಲ್ಲ ಮಧ್ಯೆ ಯಾರಿಗೆ ಹೋಗುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತು. ಇವರು ಯಾರೆಂದು ಕೇಂದ್ರದಲ್ಲಿ ಅಧಿಕಾರ ಮಾಡುತ್ತಿರುವವರಿಗೂ ಗೊತ್ತು, ರಾಜ್ಯಗಳಲ್ಲಿ ಅಧಿಕಾರ ಮಾಡುತ್ತಿರುವವರಿಗೂ ಗೊತ್ತು. ಮತ್ತೆ ಏತಕ್ಕೆ ಈ ಸಮಸ್ಯೆಗೊಂದು ಪರಿಹಾರವನ್ನು ಕಂಡು

ಹಿಡಿದಿಲ್ಲ? ಏತಕ್ಕೆಂದರೆ, ಈ ದೇಶದಲ್ಲಿ ಸಾಕಷ್ಟು ಪ್ರಭಾವವನ್ನು ಬೀರುವಂಥ ವ್ಯಕ್ತಿಗಳು ಪ್ರತಿ ಸರ್ಕಾರದಲ್ಲೂ ಇರುತ್ತಾರೆ. ಈ ಕಟು ಸತ್ಯವನ್ನು ನಾವು ಒಪ್ಪಿಕೊಳ್ಳೋಣ. ಇದಕ್ಕೇನು ತಾಂತ್ರಿಕ ಶಿಕ್ಷಣದ ಅವಶ್ಯಕತೆ ಇಲ್ಲ, ಐ.ಸಿ.ಎಸ್. ಅಥವಾ ಐಪಿ.ಎಸ್. ಶಿಕ್ಷಣದ ಅವಶ್ಯಕತೆ ಇಲ್ಲ. It is a simple fact. ಮೈಸೂರಿನಲ್ಲಿ ಹೊಗೆಸೊಪ್ಪು ಬೆಳೆಯುತ್ತಾರೆ. ಕೊಡಗಿನಲ್ಲಿ ಕಿತ್ತಳೆ ಹಣ್ಣು ಬೆಳೆಯುತ್ತಾರೆ. ಬೇಕಾದರೆ ಮಾನ್ಯ ನಾಣಯ್ಯನವರನ್ನು ಕೇಳಿ. ಬೆಳೆಯುವನಿಗೆ ಸಿಕ್ಕುವುದು ನಾಲ್ಕಾಣೆಯಾದರೆ ಕೊಂಡುಕೊಳ್ಳುವವರು ಒಂದೂವರೆ ರೂಪಾಯಿ ಕೊಟ್ಟು ತೆಗೆದುಕೊಳ್ಳುತ್ತಾರೆ. ಇವರಿಬ್ಬರ ಮಧ್ಯೆ ಇರುವವನು ಇದರ ಪೂರ್ಣ ಲಾಭವನ್ನು ಪಡೆಯುತ್ತಾನೆ. ಸಾಮಾನ್ಯವಾಗಿ ಹಣ್ಣುಗಳನ್ನು ಲಾರಿಗಳಲ್ಲಿ ತರುತ್ತಾರೆ. ಕೊಡಗಿನಿಂದ ಮೈಸೂರಿಗೆ ಒಂದು ಲಾರಿ ಹಣ್ಣು ತಂದು ದೇವರಾಜ ಮಾರ್ಕೆಟ್ಟಿನಲ್ಲಿ ನಿಲ್ಲಿಸಿಕೊಂಡು ಹಣ್ಣನ್ನು ಮಾರಾಟ ಮಾಡುವುದಕ್ಕಾಗುವುದಿಲ್ಲ. ನಾನು ನನ್ನ ಸ್ವಂತ ಅನುಭವವನ್ನು ಹೇಳುತ್ತಿದ್ದೇನೆ. ಏಕೆಂದರೆ, ಅಲ್ಲಿ ಒಂದು ಗುಂಪು ಇರುತ್ತದೆ. ಅವರನ್ನು ದಳ್ಳಾಳಿಗಳೆಂದು ಕರೆಯುತ್ತಾರೆ. ಅವರು ಎಲ್ಲ ಪಕ್ಷಗಳಲ್ಲೂ ಇರುತ್ತಾರೆ ಅವರು ಎಲ್ಲ ಮಂತ್ರಿಗಳ ಮೇಲೂ ಪ್ರಭಾವ ಬೀರುತ್ತಾರೆ. ಮತ್ತು ಎಲ್ಲ ಸರ್ಕಾರಗಳ ಮೇಲೂ ಪ್ರಭಾವ ಬೀರುತ್ತಾರೆ. ಹಣ್ಣನ್ನು ತಂದ ಲಾರಿಗೆ ಬಾಡಿಗೆ ಕೊಡಬೇಕು. ಆ ಲಾರಿಯವನು ಮೈಸೂರಿನಲ್ಲಿ ಹಣ್ಣನ್ನು ಸುರಿದು ಗೊಬ್ಬರವನ್ನೋ ಅಥವಾ ಮತ್ತಿನ್ನೇನನ್ನೋ ತುಂಬಿಕೊಂಡು ಕೊಡಗಿಗೆ ಹೋಗಬೇಕು. ಇಂತಹ ಸಂದರ್ಭದಲ್ಲಿ ಹಣ್ಣು ಬೆಳೆದ ರೈತ ಏನು ಮಾಡುತ್ತಾನೆ? ಲಾರಿ ನಿಲ್ಲಿಸಿಕೊಂಡು ಅವನು ಹಣ್ಣನ್ನು ಮಾರುವುದಕ್ಕಾಗುತ್ತದೆಯೆ? ಸರಿ, ದಳ್ಳಾಳಿ ಬಂದು, ಇಷ್ಟಕ್ಕೆ ಕೊಡುವುದಾದರೆ ಕೊಡು, ಇಲ್ಲದಿದ್ದರೆ ಬೇಡ ಎಂದು ಹೇಳುತ್ತಾನೆ. ಅವನು ಹೇಳಿದ ಬೆಲೆಗೆ ಕೊಡಲು ರೈತನಿಗೆ ಇಷ್ಟವಿರುವುದಿಲ್ಲ. ಆದರೆ, ಹಣ್ಣನ್ನು ಸುರಿಯಲಿಕ್ಕೆ ಅವನಿಗೆ ಜಾಗವಿರುವುದಿಲ್ಲ; ಜೊತೆಗೆ ಒಂದು ದಿವಸ ಹಣ್ಣುಗಳನ್ನು ಇಟ್ಟರೆ ಅವು ಕೊಳೆತು ಹೋಗುತ್ತವೆ. ಇದರಿಂದಾಗಿ ಅವನು ಸದ್ಯ ಲಾರಿ ಬಾಡಿಗೆಗೆ ಕೊಡುವಷ್ಟು ಹಣ ಸಿಕ್ಕಿದರೂ ಸಾಕೆಂದು ಹಣ್ಣನ್ನು ಮಾರಿ ಬಂದಿರುವ ನಿದರ್ಶನಗಳು ಸಾವಿರಾರು ಇವೆ. ಆದುದರಿಂದ, ರೈತರನ್ನು ಉದ್ಧಾರ ಮಾಡಬೇಕೆಂಬ ನಿಜವಾದ ಕಳಕಳಿ ಈ ರಾಷ್ಟ್ರ ಅಥವಾ ರಾಜ್ಯದಲ್ಲಿ ಅಧಿಕಾರದಲ್ಲಿದ್ದವರಿಗೆಲ್ಲ ಇದ್ದಿದ್ದರೆ ರೈತನಿಗಿಂದು ಈ ಪರಿಸ್ಥಿತಿ ಬರುತ್ತಿರಲಿಲ್ಲ. I am not accusing anyone, Even though there is a will, even though there is a mind, no Government, no individual can do it because the middleman so much influence the Government of any Party whether it is a Janata, Congress or Communist party, In all parties they have got the upper hand and they have got the influence and that is why even though everybody speaks about agriculturists' rights, nothing will go to him, That is the result to-day, ನಾವೆಲ್ಲ ಸರ್ಕಾರದಲ್ಲಿ ಇದ್ದೆವು. ರೈತರಿಗೆ ಉಪಕಾರ ಮಾಡುತ್ತೇವೆ ಎಂದು ಹೇಳಿ ೧೯೭೭ನೇ ಇಸವಿಯಲ್ಲಿ ಗೆದ್ದು ಬಂದೆವು. ಆದರೆ, ನಾವು ಏನೂ ಮಾಡುವುದಕ್ಕಾಗಲಿಲ್ಲ. ಆರು ವರ್ಷಗಳ ಕಾಲ ನಾನು ಮಂತ್ರಿಯಾಗಿದ್ದೆ. ನಾನೂ ಏನು ಮಾಡುವುದಕ್ಕಾಗಲಿಲ್ಲ. ದಳ್ಳಾಳಿಗಳನ್ನು ನಾವು ಏನೂ ಮಾಡುವುದಕ್ಕಾಗಲಿಲ್ಲ. ಅವರನ್ನು ಏತಕ್ಕೆ ತಪ್ಪಿಸಲಿಕ್ಕಾಗಲಿಲ್ಲವೆಂದರೆ, ಇದು ಸಮಾಜ. ಈ ಸಮಾಜದಿಂದ ತಪ್ಪಿಸಿಕೊಂಡು ನಾವು ಮಾಡುತ್ತೇವೆಂದರೆ ಅದಕ್ಕೆ ಬೇರೊಂದು ಕಾನೂನನ್ನೇ ಮಾಡಬೇಕು. ಈಗಿನ ಪರಿಸ್ಥಿತಿ ಏನಾಗಿದೆ ಎಂದರೆ, ಕಾರ್ಮಿಕರ ಸಮ್ಮೇಳನಕ್ಕೆ ಹೋದರೆ ಅಲ್ಲೂ ಬೇಡಿಕೆಗಳು, ವ್ಯಾಪಾರಸ್ಥರ ಸಮ್ಮೇಳನಕ್ಕೆ ಹೋದರೆ ಅಲ್ಲೂ ಬೇಡಿಕೆಗಳು. ಹೀಗಿರುವಾಗ ಬೆಳೆಯುವವನಿಗೆ ಮತ್ತು ಕೊಳ್ಳುವವನಿಗೆ ಯೋಗ್ಯ ಬೆಲೆ ಸಿಗಬೇಕೆಂದರೆ ಹೇಗೆ? ಅದರಿಂದಲೇ ಈ ಪರಿಸ್ಥಿತಿ. ಸರ್ಕಾರಗಳು ಬದಲಾದವು. ಪಕ್ಷಗಳು ಅಧಿಕಾರಕ್ಕೆ [ಬಂದು ಹೋದವು, ಆದರೆ, ಯಾವ ಪಕ್ಷ ಅಧಿಕಾರಕ್ಕೆ] ಬಂದರೂ ರೈತರ ಸ್ಥಿತಿ ಉತ್ತಮಗೊಳ್ಳಲಿಲ್ಲ. ಇದು ಕಟು ಸತ್ಯ. ಇದನ್ನು ಯಾರೂ ಮುಚ್ಚಿಡುವುದಕ್ಕಾಗುವುದಿಲ್ಲ. ಯಾರು ಏನು ಹೇಳಿಕೊಂಡರೂ, ನಾನಿದ್ದರೆ ಎಲ್ಲವನ್ನೂ ಸರಿ ಮಾಡುತ್ತೇನೆ ಎಂದು ಹೇಳಿಕೊಂಡರೂ, ಎಲ್ಲರೂ ಮಾಡಿದ್ದೆ ಇಷ್ಟು. ಐದು ರೂಪಾಯಿ ಕಡಿಮೆಯಾಗಿರಬಹುದು ಅಥವಾ ಐದು ರೂಪಾಯಿ ಜಾಸ್ತಿಯಾಗಿರಬಹುದು. ಅಷ್ಟು ಹೊರತು ಇನ್ನೇನೂ ಆಗಿಲ್ಲ. ಇನ್ನೇನು ಮಾನ್ಯ ಕೊಡಗಿಯವರೆ?

ಶ್ರೀ ಎ.ಜಿ. ಕೊಡಗಿ.—ತಾವು ಹೀಗೆ ಹೇಳಿದ ಮೇಲೆ ಮುಗಿದು ಹೋಯಿತು!

ಶ್ರೀ ಆರ್. ಗುಂಡೂರಾವ್.—ಹಾಗೆಂದು ಒಪ್ಪಿಕೊಳ್ಳಿ. ಈಗಿರುವ ಪದ್ಧತಿಯಲ್ಲಿ ಇದೆಲ್ಲ ಆಗುವುದಿಲ್ಲ. ತೀವ್ರತರವಾದ ಬದಲಾವಣೆಗಳಾಗಬೇಕು. ಈಗಿರುವ ಪದ್ಧತಿಯಲ್ಲೇ ಬದಲಾವಣೆ ಮಾಡುತ್ತೇವೆ ಎಂದರೆ ಅದನ್ನು ಮರೆತುಬಿಡಿ.

ಶ್ರೀ ಬಿ.ವಿ. ಕಕ್ಕಿಲಾಯ.—ಸ್ವಾಮಿ, ತಾವು ಈ ಸಿದ್ಧಾಂತ ಹೇಳಿದರೆ ಯಾರ ಕೈಯಲ್ಲೂ ಆಗುವುದಿಲ್ಲ.

ಶ್ರೀ ಆರ್. ಗುಂಡೂರಾವ್.—ಸ್ವಾಮಿ, ಇವೊತ್ತು ಇಲ್ಲಿ ಓದಲಿಕ್ಕೆ ದೀಪ ಆದರೂ ಇದೆ. ತಾವು ವೆಸ್ಟ್‌ಬೆಂಗಾಲ್‌ನಲ್ಲಿ ಹೋಗಿ ನೋಡಿ ಗೊತ್ತಾಗುತ್ತದೆ. ಭಾಷಣ ಮಾಡಲಿಕ್ಕೆ ಏನು ಬೇಕಾದಷ್ಟು ಹೇಳಬಹುದು. ಅದನ್ನು ಕಾರ್ಯರೂಪಕ್ಕೆ ತಂದು ತೋರಿಸಿ ಪ್ರಯತ್ನ ಮಾಡಬಾರದು ಅಂತ ನಾನು ಹೇಳುತ್ತಿಲ್ಲ. ರಾಜಕೀಯವಾಗಿ, ಪೊಲಿಟಿಕಲ್ ಗವರ್ನ್‌ಮೆಂಟ್ ಇರಬೇಕಾದರೆ ಒಂದು ರಾಜಕೀಯ ಪಕ್ಷ, ಸರ್ಕಾರ ಇರಬೇಕಾದರೆ ಇಂತಹ ಕಠಿಣವಾದ ಶಾಸನಗಳನ್ನು ಜಾರಿಗೆ ತರಲಿಕ್ಕೆ ಸಾಧ್ಯವಿಲ್ಲ. ಎಲ್ಲರಿಗೂ ಯೀಲ್ಡ್ ಆಗಬೇಕಾಗುತ್ತದೆ. ಒಂದು ಕಡೆ ಸ್ಲಮುಗಳು ಬೆಳೆಯುವುದು ಬೇಡ ಅಂತ ಹೇಳುವುದು ತಮಗೆ ಹೇಳಬೇಕು ಅಂದರೆ ಬೆಂಗಳೂರು ನಗರ ಕಾರ್ಪೊರೇಷನ್ ಎಲೆಕ್ಷನ್ ಏತಕ್ಕೆ ನಡೆದಿಲ್ಲ ಅದನ್ನು ನನ್ನ ಡಿಮ್ಯಾಂಡ್ ಬಂದಾಗ ಹೇಳುತ್ತೇನೆ. ಅಲ್ಲಿ ಚುನಾವಣೆ ಮಾಡಲಿಕ್ಕೆ ಸರ್ಕಾರಕ್ಕೆ ಇಷ್ಟ ವಿರಲಿಲ್ಲವೇನು ? ಏತಕ್ಕೆ ಚುನಾವಣೆ ಮಾಡಲಿಕ್ಕೆ ಆಗಲಿಲ್ಲ ? ಇಂತಹ ಪರಿಸ್ಥಿತಿ ರೈತರದು ಇದೆ. ಇವೊತ್ತು ರೈತರಿಗೆ ನಿಜವಾಗಿ ಉಪಕಾರ ಮಾಡಬೇಕಾದರೆ, ತಮಿಳುನಾಡಿನಲ್ಲಿ ಇವೊತ್ತಿನ ದಿವಸ ೪೦–೫೦ ಕೋಟಿ ರೂಪಾಯಿಗಳನ್ನು ಎಲ್ಲಾ ಬಿಟ್ಟು ಬಿಟ್ಟರು. ಈಗ ಕೊಟ್ಟಿರುವ ಸಾಲ ಬಿಟ್ಟು ಬಿಡ್ರಿ ಅಂದರೆ ನಮ್ಮ ವಿರೋಧ ಪಕ್ಷದ ನಾಯಕರು ಒಪ್ಪುವುದಿಲ್ಲ. ಅದು ಸರಿಯಲ್ಲ ಎಂದು ಹೇಳುತ್ತಾರೆ, ಅದನ್ನು ನಾನು ಒಪ್ಪುತ್ತೇನೆ. ಎಲ್ಲಾ ಬಿಟ್ಟು ಬಿಟ್ಟರೆ ಸರ್ಕಾರ ಇರುವುದು ಹೇಗೆ ? ರಿಸರ್ವ್ ಬ್ಯಾಂಕಿನಿಂದ ಸಾಲ ಕೊಟ್ಟಿರುತ್ತಾರೆ. ಎಲ್. ಐ. ಸಿ. ಯಿಂದ ಸಾಲ ಕೊಟ್ಟಿರುತ್ತಾರೆ. ಅನೇಕ ಸಂಸ್ಥೆಗಳಿಂದ ಸರ್ಕಾರಕ್ಕೆ ಸಾಲ ಕೊಟ್ಟಿರುವುದು ಇರುತ್ತದೆ. ಇವೊತ್ತು ನೂರಾರು ಕೋಟಿ ರೂಪಾಯಿ ಖರ್ಚು ಮಾಡಿ ಘಟಪ್ರಭ, ಮಲಪ್ರಭ ಕಟ್ಟಿರುತ್ತೇವೆ. ಅದಕ್ಕೆ ಸುಮಾರು ೩೫ ಕೋಟಿ ರೂಪಾಯಿಗಳವರೆಗೆ ಇಂಟರೆಸ್ಟ್ ಕೊಡಬೇಕಾಗುತ್ತದೆ. ಅಷ್ಟು ಹಣ ನಾವು ಕೊಡಬೇಕಾದರೆ ಇವರು ತಾನೇ ಕೊಡಬೇಕು. ಯಾರು ಯಾರು ಬೆಳೆಗಳನ್ನು ಬೆಳೆದುಕೊಳ್ಳುತ್ತಾರೆ, ಅವರು ತಾನೇ ಕೊಡಬೇಕು. ಇವೊತ್ತು ಬೆಟರ್ ಮೆಂಟ್ ಲೆವಿ, ವಾಟರ್ ರೇಟ್ ಬೇಡ ಎಂದು ಹೇಳಬೇಕಾದರೆ, ನಮಗೆ ೧೨೦ ಕೋಟಿ ರೂಪಾಯಿ ಗ್ರಾಂಟ್ ಕೊಟ್ಟು, ಆ ಸಾಲ ವಾಪಸ್ಸು ಕೊಡುವ ಹಾಗೆ ಇಲ್ಲ ಎಂದು ಹೇಳಿದರೆ ಸರ್ಕಾರ ಆಗ ನಿರ್ಣಯ ತೆಗೆದುಕೊಳ್ಳಬಹುದು. ಇವೊತ್ತು ಎಲ್ಲಾ ಪ್ರಾಜೆಕ್ಟ್‌ಗಳು ಹೇಗೆ ಬರುತ್ತವೆ? ಈ ಹಣ ವಸೂಲು ಮಾಡಬೇಕಾದರೆ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತದೆ. ಈಗ ಇದು ಏನಾಗಿದೆ ತಾತ್ಕಾಲಿಕವಾಗಿ ಹಿಂದೆ ಅವರು ಮುಖ್ಯ ಮಂತ್ರಿಗಳು ಇದ್ದಾಗ ಅಲ್ಲಿ ಹೋದರು, ಅಲ್ಲಿ ೧೦–೧೫ ಸಾವಿರ ಜನ ಸೇರಿದರು, ಆಗ ಅವರು ನಾವು ಕೊಡಲಿಕ್ಕೆ ಆಗುವುದಿಲ್ಲ ಇದು ಅನ್ಯಾಯವಾಗಿದೆ. ಇದನ್ನು ನಿಲ್ಲಿಸಬೇಕು, ತೆಗೆದುಹಾಕಬೇಕು ಎಂದು ಸಬ್‌ಮಿಟ್ ಮಾಡಿರಬಹುದು ಆಗ ಏನು ಹೇಳಿದರು. ತಾತ್ಕಾಲಿಕವಾಗಿ ನಿಲ್ಲಿಸಿ ಅನ್ಯಾಯ ಸರಿಪಡಿಸುತ್ತೇನೆ. ಎಂದು ಹೇಳಿದರು, ತಾತ್ಕಾಲಿಕವಾಗಿ ನಿಲ್ಲಿತು. ಈಗ ಪುನಃ ಅಜಿಟೇಟ್ ಮಾಡುತ್ತಿದ್ದಾರೆ, ನಾಳೆ ಹೋಗುತ್ತೇನೆ. ನಾನು ತಾತ್ಕಾಲಿಕವಾಗಿ ಮುಂದುವರಿಸುತ್ತೇನೆ. ಎಂದು ಹೇಳಿದರೆ, ನನ್ನ ಕಾಲದಲ್ಲಿ ನಾನು ಇಷ್ಟು ನಿಲ್ಲಿಸಿದೆ, ನಿನ್ನ ಕಾಲದಲ್ಲಿ ನೀನು ಅಷ್ಟು ನಿಲ್ಲಿಸಿದೆ, ಅಂದರೆ ಇದು ಹೀಗೆ ಕಾಲ ನಡೆಯುತ್ತಾ ಇರುತ್ತದೆ. ೧೯೪೭ರಲ್ಲಿ ಒಂದು ಕಾಲ ಇತ್ತು. ಆಗ ನಾವು ಸ್ವಾತಂತ್ರ್ಯಕೋಸ್ಕರ ಹೋರಾಟ ಮಾಡಿದವರು, ದೇಶಕ್ಕೆ ತ್ಯಾಗ ಮಾಡಿದವರು, ನಮಗೆ ರಾಜ್ಯ ಕೊಡಿ ಎಂದು ಹೇಳುತ್ತಿದ್ದರು ಅದು ೧೯೬೭ರಲ್ಲಿ ಮಾಯವಾಯಿತು. ಈಗ ಈ ಸೆಕ್ಷನ್ ಹೊಸ ಸಮಾಜವಾದ.

ಶ್ರೀ ಡಿ. ದೇವರಾಜ್ ಅರಸ್.—ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಇನ್ನು ಎಷ್ಟು ಹೊತ್ತು ಭಾಷಣ ಮಾಡುತ್ತಾರೆ ಅಂತ ತಿಳಿದುಕೊಳ್ಳಬೇಕಾಗಿದೆ. He is traversing whole universe. Of course he has got right to speak. let him speak. We have no objection. We thought we are confining ourselves about the firing, abont the incident that has taken place at Hubli and other places. At this rate the Hon'ble Chief Minister may require another 2 hours. We are prepared to listen. But the question is till what time we are going to sit here. Are we going to sit upto 8' O clock. Let us know about it. If they

want us to sit till 9-00 P.M. I have absolutely no objection. Now that the Chief Minister has raised several issues, we have heard his speech so far, we also have to answer some of the points. ಇಲ್ಲಿ ಏನೋ ಕ್ಲಾರಿಫಿಕೇಷನ್ ಕೇಳಿಬಿಟ್ಟು ಸುಮ್ಮನೆ ಹೊರಟು ಹೋಗಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಅನೇಕ ವಿಷಯಗಳನ್ನು ಮೂಲ ಸಮಸ್ಯೆಗಳನ್ನು ಹಿಂದಿನ ಕಾಲದಿಂದ ನಡೆದು ಬಂದಿರುವುದನ್ನು ಹೇಳು ತ್ತಿದ್ದಾರೆ ಏನೋ ಒಂದು ವಿಚಾರ ಹೇಳುತ್ತಿದ್ದಾರೆ. ಇದನ್ನು ಕೇಳಿಬಿಟ್ಟು ನಾವು ಸುಮ್ಮನೆ ಕುಳಿತು ಕೊಂಡು ಹೋಗಲಿಕ್ಕೆ ಸಾಧ್ಯವಿಲ್ಲ. ನಾವು ಮಾತನಾಡುವುದು ಇದೆ. ನಾವು ಇವೊತ್ತು ಬೆಳಿಗ್ಗೆ ೮ ಗಂಟೆಗೆ ಸೇರಿದ್ದು, ಮಧ್ಯಾಹ್ನ ೨ ಗಂಟೆಗೆ ಅಡ್ಜರ್ನ್ ಆಗಿ ಮತ್ತೆ ೩ ಗಂಟೆಗೆ ಸೇರಿದ್ದೇವೆ. ಈಗ ೭ ಗಂಟೆ ಮೇಲಾಗಿದೆ. ನಾನು ಕುಳಿತುಕೊಳ್ಳಲಿಕ್ಕೆ ತಯಾರಿದ್ದೇನೆ, ಆದರೆ ಸಭೆ ಕೂಡ ತಯಾರಿರಬೇಕು. ನನ ಗೇನು ಊಟವೇ ಬೇಡ, ಇನ್ನೂ ಎಷ್ಟು ಹೊತ್ತು ಸಮಯ ಮಾನ್ಯ ಮುಖ್ಯ ಮಂತ್ರಿಗಳಿಗೆ ಬೇಕು ಹೇಳಲಿ. ಅನಂತರ ಅವರು ನಮ್ಮ ಭಾಷಣ ಕೇಳಿಕೊಂಡು ಕುಳಿತುಕೊಳ್ಳಬೇಕಾಗುತ್ತದೆ. ಮೊದಲು, ಈ ಪ್ರತಿನಿಧಿಗಳಿಗೆ ಏನು ಮಾಡುತ್ತೀರಾ ಅಂತ ಹೇಳಿ ಆಮೇಲೆ ಇದನ್ನೆಲ್ಲಾ ಮಾತನಾಡೋಣ. ಮಾನ್ಯ ಮಂತ್ರಿಗಳು ಇದನ್ನೆಲ್ಲಾ ಹೇಳಲೇಬೇಕು ಎಂದು ಮನಸ್ಸು ಇದ್ದರೆ ಅದರ ಬಗ್ಗೆ ನನ್ನ ಅಡ್ಡಿ ಇಲ್ಲ. ಅದೇ ರೀತಿ ನಾನು ಹೇಳುವುದಕ್ಕೂ ನೀವು ಅಡ್ಡಿ ಮಾಡಲಿಕ್ಕೆ ಆಗುವುದಿಲ್ಲ. ಆದುದರಿಂದ, ಇನ್ನು ಎಷ್ಟು ಹೊತ್ತು ಕುಳಿತುಕೊಳ್ಳಬೇಕು ಎಂದು ತಿಳಿಸಿ.

ಶ್ರೀ ಆರ್. ಗುಂಡೂರಾವ್.—ಅಧ್ಯಕ್ಷರೆ, ಇವೊತ್ತು ಬೆಳಿಗ್ಗೆ ೮ ಗಂಟೆಗೆ ಬಂದದ್ದು ನಿಜ. ೯ ಗಂಟೆಗೆ ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ೨ ಗಂಟೆಯವರೆಗೆ ಇದರ ಬಗ್ಗೆ ಮಾತನಾಡಿದ್ದಾರೆ. ಸುಮಾರು ನಾಲ್ಕೂವರೆ ಗಂಟೆಯಿಂದ ನಾನು ಮಾತನಾಡಿಲ್ಲ. ನಾನು ಪ್ರಾರಂಭ ಮಾಡಿ ಮುಕ್ಕಾಲು ಗಂಟೆ ಆಗಿದೆ. ಮಾತನಾಡುವ ಸನ್ನಿವೇಶದಲ್ಲಿ ಈ ವಿಷಯಕ್ಕೆ ಕನ್‌ಫ್ಯೆನ್ ಆಗಿ ಮಾತನಾಡಿಲ್ಲ. ಕೆಲವರು ಬ್ಯಾಕ ಗ್ರೌಂಡ್ ಕೊಟ್ಟಿದ್ದಾರೆ. ನಾನು ಇನ್ನು ಪ್ರಾರಂಭ ಮಾಡಿ ಮುಕ್ಕಾಲು ಗಂಟೆ ಆಗಿಲ್ಲ. ನಾನು ೬ ಗಂಟೆ ೩೫ ನಿಮಿಷಕ್ಕೆ ಪ್ರಾರಂಭ ಮಾಡಿದ್ದು.

ಈ ಸದನದ ಸಮಯವನ್ನು ಹೆಚ್ಚು ತೆಗೆದುಕೊಂಡು ಮಾತನಾಡಬೇಕೆಂಬ ಉದ್ದೇಶ ನನಗಿಲ್ಲ. ಬ್ಯಾಕ್ ಗ್ರೌಂಡ್ಸ್ ಕೊಟ್ಟೆ ಅಷ್ಟೆ. ಸಮಸ್ಯೆಯ ಹಿನ್ನಲೆಯಲ್ಲಿ ಕೆಲವು ವಿಷಯಗಳನ್ನು ಹೇಳಿದ್ದೇನೆ. ಆಮೇಲೆ ನಾನು ಹೇಳಿದ್ದೆಲ್ಲಾ ಸರಿ ಎಂದು ತಿಳಿದುಕೊಂಡಿರುವವನೂ ನಾನಲ್ಲ. ಪರಿಸ್ಥಿತಿ ಇವತ್ತಿಗೂ ಸರಿಹೋಗಿಲ್ಲ, ಹಿಂದೆ ಅಧಿಕಾರದಲ್ಲಿದ್ದಂತಹವರು ಎಲ್ಲರೂ, ಬಂದು ಬಂದವರು ನೋಡೋಣ ಎಂದು ಹೇಳಿಕೊಂಡು ತಮ್ಮ ತಮ್ಮ ಫೋರ್‌ಮನ್ ಕೆಲಸವನ್ನು ಮಾಡಿಕೊಂಡು ಹೋಗಿದ್ದಾರೆ. ಇವತ್ತು ನನ್ನಕಾಲ ಬಂದಿದೆ. ಇದನ್ನು ಬಗೆಹರಿಸುವುದಕ್ಕೆ ಇದುವರೆಗೂ ಯಾರ ಕೈಯ್ಯಲೂ ಸಾಧ್ಯವಾಗಿಲ್ಲ. It has been accepted by every one and every where both inside and outside the H use and the whole country knows about it. ರೈತ ಈ ರೀತಿ ಮಾಡುವುದಿಲ್ಲ ಎಂದು ಎಲ್ಲರಿಗೂ ಗೊತ್ತು. ಎಲ್ಲ ಪಕ್ಷದವರಿಗೂ ಗೊತ್ತು. ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಇದರ ಹಿಂದೆ ಇನ್ನೂ ಬ್ಯಾಕ್‌ಗ್ರೌಂಡ್ ಇದೆ. ಅದೆಲ್ಲವನ್ನೂ ಹೇಳುವುದಕ್ಕೆ ಪ್ರಾರಂಭ ಮಾಡಿದರೆ ದಿನಗಟ್ಟಲೆ ಮಾತ ನಾಡಬಹುದು ಗಂಟೆಗಟ್ಟಲೆ ಮಾತನಾಡಬಹುದು. ಈ ಸಮಸ್ಯೆ ಯಾರ ಕೈಯ್ಯಲ್ಲೂ ಬಿಡಿಸಲಾಗದಿರುವ ಸಮಸ್ಯೆ ಈ ವಿಷಯದಲ್ಲಿ ಮಾನ್ಯ ಸದಸ್ಯರು ನ್ಯಾಯಾಂಗ ವಿಚಾರಣೆ ಆಗಬೇಕೆಂದು ಈ ಒಂದು ಹಂತದಲ್ಲಿ ಹೇಳುವುದು. ಅಷ್ಟೊಂದು ಸರಿಯಾದುದಲ್ಲ ಎಂಬುದು ನನ್ನ ಅಭಿಪ್ರಾಯ. ಆದು ಆಗಬಾರದಿತ್ತು. ನಡೆದು ಹೋಗಿದೆ. ಒಂದು ಕಡೆ ಪೋಲೀಸಿನವರು ಅತಿರೇಕ ಮಾಡಿದ್ದಾರೆಯೋ ಅಥವಾ ಇನ್ನೊಂದು ಯಾರು ರೈತರು ಅತಿರೇಕ ಮಾಡಿದ್ದಾರೆಯೋ ಎಂಬುದು ಯಾವುದೂ ನಮ್ಮ ಮುಂದೆ ಈಗ ಇಲ್ಲ. ನಾನು ವರದಿ ಓದಿದ ಪ್ರಕಾರ ಇದರಲ್ಲಿ ಪೋಲೀಸಿನವರ ಅತಿರೇಕವೂ ಇಲ್ಲ. ಸದಸ್ಯರು ಮಾತನಾಡಿದ ಪ್ರಕಾರವೂ ಪೋಲೀಸಿನವರ ಅತಿರೇಕ ಇಲ್ಲ. ಮತ್ತೆ ಮುಗ್ಧ ರೈತರು ಈ ಕೆಲಸವನ್ನು ಮಾಡಿದ್ದಾರೆಯೋ ಎಂಬುದೂ ಕೂಡ ಗೊತ್ತಿಲ್ಲ. ಯಾರು ಮಾಡಿದ್ದಾರೆ ಎಂಬುದರ ಪೂರ್ತಿ ವಿಷಯ ಬರಬೇಕಾಗಿದೆ. ಮೆರವಣಿಗೆ ಬರಬೇಕಾದರೆ ಅದರಲ್ಲಿ ಎಲ್ಲ ವರ್ಗದ ಜನರೂ ಸೇರಿಕೊಂಡಿರುತ್ತಾರೆ. ಅನೇಕ ಸಲ ಈ ಸದನದಲ್ಲೇ ಚರ್ಚೆಯಾಗಿದೆ. ವಿದ್ಯಾರ್ಥಿಗಳು ಮುಷ್ಕರ ಮಾಡಿದ್ದಕ್ಕೆ ಸರ್ಕಾರದ ಪೋಲೀಸಿನವರು ಲಾಠಿಚಾರ್ಜ್ ಮಾಡಿದರು, ಗೋಲಿಬಾರ್ ಮಾಡಿದರು. ವಿದ್ಯಾರ್ಥಿಗಳು ಪಾಪಾ ಶಾಂತ ರೀತಿಯಲ್ಲಿ ಮೆರವಣಿಗೆ ಬರುತ್ತಿದ್ದರೆ ಅವರ ಮೇಲೆ ಗೋಲಿಬಾರ್ ಮಾಡಿದರು ಎಂಬುದಾಗಿ ಈ

ಸದನದಲ್ಲೇ ಚರ್ಚೆಯಾದಾಗ ಆಗ ಸರ್ಕಾರ ಏನು ಉತ್ತರ ಕೊಟ್ಟಿದೆ ಎಂದರೆ ವಿದ್ಯಾರ್ಥಿಗಳ ಗುಂಪಿನಲ್ಲಿ ಕೆಲವು ಸಮಾಜ ಘಾತುಕರು, ಮಿಸ್‌ಕ್ರಿಯೆಂಟ್ಸ್, ಪಿಕ್‌ಪಾಕೆಟರ್ಸ್ ಸೇರಿಕೊಂಡು, ಕಲ್ಲು ಹೊಡೆಯುವುದು ಬಸ್ಸನ್ನು ಸುಡುವುದು. ಈ ರೀತಿಯ ಕೆಲಸವನ್ನು ಸಮಾಜಘಾತುಕ ವ್ಯಕ್ತಿಗಳಿಂದ ಈ ಕೆಲಸ ನಡೆದಿದೆ. ಅದನ್ನು ತಡೆಯುವುದಕ್ಕೋಸ್ಕರ, ಶಾಂತಿ ಪಾಲನೆ ಮಾಡುವುದಕ್ಕೋಸ್ಕರ ಪೋಲೀಸಿನವರು ಲಾಠಿಚಾರ್ಜ್ ಗೋಲಿಬಾರ್ ಮಾಡಬೇಕಾಯಿತು ಎಂಬ ಉತ್ತರವನ್ನು ಅನೇಕ ಬಾರಿ, ನೂರಾರು ಸಂದರ್ಭದಲ್ಲಿ ಈ ಸದನದಲ್ಲೇ ಹೇಳಿಕೆ ಮಾಡಿರುವುದು ನಮಗೆಲ್ಲರಿಗೂ ಗೊತ್ತಿದೆ. ಅದೇ ಪ್ರಕಾರ ಈ ಘಟನೆ ನಡೆದಂತಹ ಸ್ಥಳದಲ್ಲೂ ಆಗಿದೆ. ಇದರಲ್ಲಿ ಪೋಲೀಸ್ ಅಧಿಕಾರಿಗಳು ಸತ್ತು ಹೋಗಿದ್ದಾರೆ, ಪೋಲೀಸಿನವರು ಸತ್ತು ಹೋಗಿದ್ದಾರೆ. ಇಬ್ಬರು ರೈತರು ಕೂಡ ಸತ್ತು ಹೋಗಿದ್ದಾರೆ. ಮತ್ತೆ ಇದಾದ ತಕ್ಷಣ ಈ ಒಂದು ಘಟನೆಗಳು ನಡೆದಂತಹ ಸ್ಥಳಕ್ಕೆ ಹಿರಿಯ ಅಧಿಕಾರಿಗಳು ಹೋಗಿದ್ದಾರೆ. ನಾಳೆ ದಿವಸ ಬೆಳಗ್ಗೆ ನಾನೂ ಅಲ್ಲಿಗೆ ಹೋಗುವವನಿದ್ದೇನೆ. ನಾನೂ ಸಹ ಹೋಗಿ ನಡೆದಂತಹ ಎಲ್ಲ ಸ್ಥಳಕ್ಕೂ ಭೇಟಿಕೊಟ್ಟು ಬರುವವನಿದ್ದೇನೆ. ರೈತನನ್ನು ಮತ್ತು ಅಧಿಕಾರಿಗಳು ಒಂದ ಕಡೆ ಸೇರಿಸಬೇಕೆಂದು ಶ್ರೀಮಾನ್ ಅರ್ಮುಗಂರವರು ಹೇಳಿದರು. Panic is created among all people and they are also in fear whether the police will take revenge or not ಅದಕ್ಕಿಂತ ಹೆಚ್ಚಾಗಿ ಅಧಿಕಾರಿಗಳು ಡೀಮಾರಲೈಸ್ ಆಗಿದ್ದಾರೆ. ಒಂದು ಕಡೆ ಲೋಕೋಪಯೋಗಿ ಇಲಾಖೆಯ ಜೀಪುಗಳು ಸುಟ್ಟು ಹೋಗಿವೆ. ತಹಶೀಲ್ದಾರ್‌ರವರ ಆಫೀಸಿನಲ್ಲಿದ್ದಂತಹ ರೆಕಾರ್ಡುಗಳೆಲ್ಲವೂ ಸುಟ್ಟುಹೋಗಿವೆ. ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿದ್ದಂತಹ ರೆಕಾರ್ಡುಗಳು ಸುಟ್ಟು ಹೋಗಿವೆ. ಎಕ್ಸೈಜ್ ಡಿಪಾರ್ಟ್‌ಮೆಂಟ್‌ನಲ್ಲಿರತಕ್ಕಂತಹ ಪೋಲೀಸ್ ವ್ಯಾನುಗಳು ಸುಟ್ಟು ಹೋಗಿವೆ. ಇಂತಹ ಒಂದು ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಎರಡೂ ಕಡೆಯ ಪರಿಸ್ಥಿತಿ ಈ ತರಹ ಇರಬೇಕಾದರೆ, ನಾನು ನಾಳೆ ದಿವಸ ಬೆಳಗ್ಗೆ ಅಲ್ಲಿಗೆ ಹೋಗುತ್ತಿದ್ದೇನೆ. ನಾನು ಹೋಗುವಾಗ ಮಾನ್ಯ ವಿರೋಧಪಕ್ಷದ ಸದಸ್ಯರು ನನ್ನ ಜೊತೆಯಲ್ಲಿ ಯಾರಾದರೂ ಬರುವುದಿದ್ದರೆ ಅವರನ್ನು ಕರೆದುಕೊಂಡು ಹೋಗುವುದಕ್ಕೆ ತಯಾರಾಗಿದ್ದೇನೆ. ನಾಳೆ ಬೆಳಗ್ಗೆ ೭ ಅಥವಾ ೭-೩೦ ಘಂಟೆಗೆ ಇಲ್ಲಿಂದ ಹೊರಟರೆ ಸಂಜೆ ವಾಪಸ್ಸು ಬರಬಹುದು. ನಮಗೆ ಸ್ವತಃ ವಿಚಾರ ಗೊತ್ತಾಗುತ್ತದೆ. ಇದರಲ್ಲಿ ಯಾರೂ ಅತಿರೇಕದಿಂದ ವರ್ತನೆ ಮಾಡಿರುವುದು ಕಂಡುಬರುತ್ತಿಲ್ಲ, ಘಟನೆ ನಡೆದಿದೆ, ಪೋಲೀಸಿನವರು ಅತಿರೇಕ ಮಾಡಿದ್ದಾರೆಂಬುದೂ ಕಾಣುತ್ತಿಲ್ಲ, ಅಧಿಕಾರಿಗಳು ಮಾಡಿದ್ದಾರೆಂಬುದೂ ಕಾಣುತ್ತಿಲ್ಲ, ಈ ತರಹದ ಪರಿಸ್ಥಿತಿ ಅಲ್ಲಿರುವ ದಿಸೆಯಿಂದ ನಾಳೆ ದಿವಸ ಅಲ್ಲಿಗೆ ಹೋಗಿ ಬಂದು ಆಮೇಲೆ ಅಲ್ಲಿರತಕ್ಕಂತಹ ಪರಿಸ್ಥಿತಿಯನ್ನು ಪುನಃ ಈ ಸದನದ ಮುಂದೆ ಆ ವರದಿಯನ್ನೂ ಇಡುವುದಕ್ಕೆ ತಯಾರಾಗಿದ್ದೇನೆ. ಏನು ನಡೆದಿದೆ ಎಂಬುದನ್ನು ಪಟ್ಟಿ ಮಾಡಿಕೊಂಡ ಬಂದು ವಸ್ತುಸ್ಥಿತಿ ಏನು ? ಎಲ್ಲವನ್ನೂ ತಿಳಿದುಕೊಂಡು ಬಂದು ಈ ಸದನದ ಮುಂದೆ ಇಡುವುದಕ್ಕೆ ನಾನು ಸಿದ್ಧನಿದ್ದೇನೆ. ಮತ್ತೆ ಈಗ ಆ ಒಂದು ಘಟನೆ ನಡೆದ ತಕ್ಷಣ ಈ ಒಂದು ಹಂತದಲ್ಲಿ ನ್ಯಾಯಾಂಗ ವಿಚಾರಣೆಯನ್ನು ಮಾಡುವುದರಿಂದ ಯಾವುದೇ ಉದ್ದೇಶ ಸಾಧನೆಯಾಗುವುದಿಲ್ಲ. ಅದರಿಂದ ರೈತರಿಗೂ ರಕ್ಷಣೆಯನ್ನು ಕೊಟ್ಟ ಹಾಗೂ ಆಗಲಿಕ್ಕಿಲ್ಲ. ಅಧಿಕಾರವರ್ಗದವರಿಗೂ ಒಂದು ತರಹದಲ್ಲಿ ಅನುಕೂಲ ಮಾಡಿಕೊಟ್ಟ ಹಾಗೆ ಆಗುವುದಿಲ್ಲ. ಇದರಿಂದ ಸರ್ಕಾರಕ್ಕೂ ಯಾವುದೇ ರೀತಿಯ ಉಪಯೋಗವಾಗುವುದಿಲ್ಲ. ಮತ್ತೆ ಇದು ಸರ್ಕಾರಕ್ಕೆ ಇವತ್ತು ಅಲ್ಲಿ ವಿವಿಧ ರೀತಿಯಲ್ಲಿ ನಡೆಯುತ್ತಿರತಕ್ಕಂತಹ ವಿದ್ಯಮಾನಗಳನ್ನು ನೋಡಿದರೆ In this stage it is not advisable and it is not proper to order for judicial enquiry. ಆದ್ದರಿಂದ ಮಾನ್ಯ ವಿರೋಧಪಕ್ಷದ ಸದಸ್ಯರು ಮತ್ತು ನಾಯಕರು ನ್ಯಾಯಾಂಗ ವಿಚಾರಣೆ ಆಗಬೇಕೆಂಬ ಮೂಲ ಉದ್ದೇಶ ಏನು ಇಟ್ಟುಕೊಂಡಿದ್ದಾರೆ. ಅದು ಉದ್ಭವವಾಗುವುದಿಲ್ಲ. ನೋಡೋಣ, ಒಂದು ವೇಳೆ ಪರಿಸ್ಥಿತಿ ಏನೇನು ಆಗಿದೆ ಎಂಬುದರ ಬಗ್ಗೆ ಮೊದಲು ಅಲ್ಲಿಗೆ ಹೋಗಿ ಎಲ್ಲಿ ಎಕ್ಸೆಸ್ ಆಗಿದೆ ಎಂಬುದು ಸಾಬೀತಾದರೆ ಆ ಹಂತದಲ್ಲಿ ಆಲೋಚನೆ ಮಾಡಬಹುದು. ಆದರೆ ಈಗ ನ್ಯಾಯಾಂಗ ವಿಚಾರಣೆಗೆ ಸರ್ಕಾರ ಈ ಹಂತದಲ್ಲೇ ಒಪ್ಪುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಸ್ಪಷ್ಟಪಡಿಸುತ್ತಿದ್ದೇನೆ.

ಎರಡನೆಯದಾಗಿ ಶ್ರೀಮಾನ್ ಬೊಮ್ಮಾಯಿಯವರು ಸದನದ ಸಮಿತಿಯನ್ನು ಅಲ್ಲಿಗೆ ಕಳುಹಿಸಬೇಕೆಂದು ಹೇಳಿದರು. ಸದನದ ಸಮಿತಿ ಈ ಹಂತದಲ್ಲಿ ಅಲ್ಲಿಗೆ ಹೋಗುವುದರಿಂದ ನನಗನ್ನಿಸಿದ ಹಾಗೆ ಹೆಚ್ಚಿನ ಪರಿಣಾಮ ಏನು ಆಗುವುದಿಲ್ಲ. ಇದಕ್ಕೋಸ್ಕರ ನಾನು ಹೇಳುವುದೇನೆಂದರೆ ಹೇಗೂ ನಾನೇ ಹೋಗುತ್ತಿದ್ದೇನೆ. ಸಂಬಂಧಪಟ್ಟಂತಹ ಶಾಸಕರು, ಬೊಮ್ಮಾಯಿಯವರು, ಆರ್. ಎಸ್. ಪಾಟೀಲ್

ರವರು ಬಿ. ಆರ್. ಪಾಟೀಲ್‌ರವರು ಎಲ್ಲರೂ ಬರಬಹುದು. ಅಂತೂ ೩ ಜನಗಳನ್ನು ಕರೆದುಕೊಂಡು ಹೋಗಬಹುದು. ಕಾರಣ ಹೆಲಿಕ್ಯಾಪ್ಟರಿನಲ್ಲಿ ೪ ಜನಗಳಿಗೆ ಮಾತ್ರ ಜಾಗ ಇರುವುದು. ಬೆಳಗ್ಗೆ ೭ ಘಂಟೆಗೆ ಹೊರಟರೆ ಮೂರು ಭಾಗಗಳಿಗೂ ಹೋಗಿ ವಿಚಾರವನ್ನು ತಿಳಿದುಕೊಂಡು ಸಂಜೆ ೪ ಗಂಟೆಗೆ ವಾಪಸ್ಸು ಬರಬಹುದು. ನಾನು ಪ್ರಥಮದಲ್ಲೇ ಹೇಳಿದ್ದೇನೆ. ಇದು ಪಕ್ಷದ ಪ್ರಶ್ನೆಯಲ್ಲ. ಸರ್ಕಾರದ ಪ್ರತಿಷ್ಟೆಯ ಪ್ರಶ್ನೆಯಲ್ಲ. ಘಟನೆ ನಡೆದಿದೆ. ನಾವು ಅಲ್ಲಿಗೆ ಹೋಗಿ ನೋಡಿಕೊಂಡು ಬರೋಣ. ಪುನಃ ಆಶ್ವಾಸನೆ ಯನ್ನು ಕೊಡುತ್ತಿದ್ದೇನೆ. ನಾನು ಬಹುಶಃ ಅನೇಕ ಸಂದರ್ಭದಲ್ಲಿ ಈ ಸದನದ ಎಲ್ಲ ವಿರೋಧಪಕ್ಷದ ಸದಸ್ಯರು ಒಪ್ಪುತ್ತಾರೆಂದು. ಕಾಣುತ್ತದೆ. ಕ್ಲಿಷ್ಟವಾದ ವಿಷಯಗಳು ಬಂದಾಗ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವ ಒಂದು ನೀತಿಯನ್ನು ಅನುಸರಿಸಿಕೊಂಡು ಬಂದಿದ್ದೇವೆ. ಯಾರೋ ಒಬ್ಬರು ನನಗೆ ಹೇಳಿದರು ಏನು ನೀವು ಎಲ್ಲಾ ಸಮಯದಲ್ಲೂ ಅವರು ಹೇಳಿದ ಹಾಗೇ ಕೆಲಸ ಮಾಡುತ್ತಿದ್ದೀರಲ್ಲಾ ಅಂತ. ಆಗ ನಾನು ಅವರಿಗೆ ಹೇಳಿದ್ದೇನೆಂದರೆ That is real democracy. After all action and reaction are meant for all of us for national sake, because my party is in majority, I am the Chief Minister. If majority is formed that side, they will become the Ministers and form the Government. It is the question of numbers. ಆದ್ದರಿಂದ ನಾನು ಹೇಳುವುದೇ ನೆಂದರೆ ಸರ್ವಸ್ವವನ್ನೂ ತಿಳಿದುಕೊಂಡಿರುವವನು ನಾನು ಎಂಬುದಾಗಿ ಯಾವತ್ತು ತಿಳಿದುಕೊಂಡಿಲ್ಲ. I always believe in taking into confidence the opposition group. ಬಹುಶ: ಕರ್ನಾಟಕ ರಾಜಕೀಯ ಇತಿಹಾಸವನ್ನು ತೆಗೆದುಕೊಂಡರೆ ಇಷ್ಟೊಂದು ರೀತಿಯಲ್ಲಿ ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಿದಂತಹ ಸರ್ಕಾರ ಯಾವುದೆಂದು ನಾನು ಘಂಟಾ ಘೋಷದಿಂದ ಹೇಳುವುದಾದರೆ, That is my Government. Proper representation has been given to them in all Committees and also on all other issues I used to discuss with them and take decisions.

7-30 P. M.

ಆದುದರಿಂದ ಇವತ್ತು ನನ್ನ ಜೊತೆಯಲ್ಲಿ ಬರಲಿ ಅಲ್ಲಿ ಹೋಗಿ ಬಂದ ಮೇಲೆ ವಿಚಾರ ಮಾಡೋಣ ನಾವೂ ನೀವೂ ಎಲ್ಲರೂ ಚರ್ಚೆ ಮಾಡೋಣ. I told Mr. Arumugham also, when I was talking about this. ರೈತರ ಒಂದು ಹಿತದೃಷ್ಟಿಯಿಂದ ಮತ್ತು ಆಡಳಿತದ ಹಿತದೃಷ್ಟಿ ಯಿಂದ ಯಾವ ರೀತಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆನ್ನುವ ಬಗ್ಗೆ ಚರ್ಚೆ ಮಾಡಿ ಒಂದು ಅಭಿಪ್ರಾಯಕ್ಕೆ ಬರೋಣ. ಇಷ್ಟು ಹೇಳಿ ನಾನು ಮಾನ್ಯ ಸದಸ್ಯರಿಗೆ ಈ ಬಗ್ಗೆ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಯಾಕೆಂದರೆ ಶ್ರೀ ದೇವೇಗೌಡರು, ಶ್ರೀ ಬೊಮ್ಮಾಯಿಯವರು ಹಾಗೂ ಮಾನ್ಯ ವಿರೋದಪಕ್ಷದ ನಾಯಕರು ರೆವಿನ್ಯೂ ಇಲಾಖೆಯ ಮೇಲಿನ ಚರ್ಚೆಗೆ ಮಾನ್ಯಮಂತ್ರಿಗಳು ಉತ್ತರ ಕೊಟ್ಟ ಮೇಲೆ ಈ ವಿಷಯವನ್ನು ಚರ್ಚೆ ಮಾಡೋಣ ಎಂದು ಹೇಳಿದ್ದರು. That shows their generosity, their magnanimity and their healthy relationship between the Ruling party and the Opposition Parties. I compliment them for having co-operated with me. We will close this matter at this stage. And then we will see what will happen. That is all I can say.

ಇನ್ನು ಪರಿಹಾರ ಕೊಡತಕ್ಕದ್ದರ ಬಗ್ಗೆ ಹೇಳುತ್ತಾ ಈ ವಿಚಾರದಲ್ಲಿ ಈಗ ಸರ್ಕಾರಿ ನೌಕರರು ಯಾರೇ ತೀರಿಹೋದರೂ ಇಷ್ಟು ಪರಿಹಾರವನ್ನು ಕೊಡಬೇಕೆಂದು ಕಾನೂನೇ ಇದೇ. ೧೦,೦೦೦ ರೂಪಾಯಿ ಪರಿಹಾರ ಕೊಡಬೇಕು ಎಂದು ಇದೆ. ಇಲ್ಲಿ ಯಾರು ಪೋಲೀಸ್ ಅಧಿಕಾರಿಗಳು ಸತ್ತಿದ್ದಾರೆ. ಅವರ ಕುಟುಂಬ ವರ್ಗದವರಿಗೆ ತಲಾ ೧೦,೦೦೦ ರೂಪಾಯಿಯ ಪರಿಹಾರವನ್ನು ಕೊಡಲಾಗುವುದು. ಮತ್ತು ಅಲ್ಲಿ ರೈತರು ಯಾರು ಸತ್ತು ಹೋಗಿದ್ದಾರೆ ಅವರ ಕುಟುಂಬದವರಿಗೆ ೫,೦೦೦ ರೂಪಾಯಿಯ ಪರಿಹಾರವನ್ನು ಕೊಡಲಾಗುವುದು. ಅವರು ಬಡವರಾಗಿದ್ದ ಪಕ್ಷದಲ್ಲಿ ನಾಳೆ ಹೋಗಿ ನೋಡಿ ಬಂದ ಮೇಲೆ ಇವರ ಕುಟುಂಬದವರಿಗೆ ಸ್ವಲ್ಪ ಜಾಸ್ತಿ ಪರಿಹಾರಧನವನ್ನು ಕೊಡುವ ಬಗ್ಗೆಯೂ ಯೋಚನೆ ಮಾಡಲಾಗುವುದು. ಹಾಗೂ ಇಲ್ಲಿ ಯಾರು ಗಾಯಗೊಂಡಿದ್ದಾರೆ ಅವರಿಗೆ ಅವರ ಸ್ಥಿತಿಗತಿಗಳನ್ನು

ನೋಡಿಕೊಂಡು ೧,೦೦೦ ರೂಪಾಯಿಗಳಿಂದ ೫,೦೦೦ ರೂಪಾಯಿಗಳವರೆಗೆ ಪರಿಹಾರವನ್ನು ಕೊಡಲಾಗುವುದು.

† ಶ್ರೀ ಡಿ. ದೇವರಾಜ್ ಅರಸ್ (ಮಾನ್ಯ ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೆ, ಇದುವರೆವಿಗೂ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದನ್ನು ನಾವು ಕೇಳಿ ಒಂದು ವಿಚಾರವನ್ನು ಅವರಿಂದ ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿದೆಯೆಂದು ನನ್ನ ಭಾವನೆ. ಅವರು ಮಾತನಾಡುವಾಗ ಈಗ ನ್ಯಾಯಾಂಗ ತನಿಖೆ ಮಾಡುವುದಕ್ಕೆ ತೀರ್ಮಾನ ತೆಗೆದುಕೊಳ್ಳುವುದು ಸರಿಯಲ್ಲ. ನಾವು ಅಲ್ಲಿಗೆ ಹೋಗಿ ನೋಡಿಕೊಂಡು ಬರೋಣ. ಅಲ್ಲಿಯ ವಿದ್ಯಮಾನಗಳನ್ನು ನಾನು ಹೋಗಿ ನೋಡಿಕೊಂಡು ಬಂದ ಮೇಲೆ ಮತ್ತೆ ಚರ್ಚೆ ಮಾಡೋಣವೆಂದಿದ್ದಾರೆ. ಅಲ್ಲಿನ ವಿದ್ಯಮಾನಗಳನ್ನು ನೋಡಿ ಬಂದಮೇಲೆ ಚರ್ಚೆ ಮಾಡಿ ಅಗತ್ಯವಿದ್ದರೆ ಮಾಡೋಣ ಎಂದು ಹೇಳಿದ್ದಾರೆಂದು ನನ್ನ ಭಾವನೆ. ಈ ರೀತಿ ವಿದ್ಯಮಾನಗಳು ನಡೆದಾಗಲೆಲ್ಲಾ ನ್ಯಾಯಾಂಗ ತನಿಖೆ ಮಾಡಬೇಕಾಗಿಲ್ಲ, ಅದು ಜನರಲ್ ಪಾಲಿಸಿ ಅಲ್ಲ. ಆದುದರಿಂದ ನ್ಯಾಯಾಂಗ ತನಿಖೆ ಮಾಡುವ ಅಗತ್ಯ ಇಲ್ಲ ಎನ್ನುವ ಭಾವನೆ ಅವರಲ್ಲಿ ಇದ್ದರೆ ಅದನ್ನೂ ಹೇಳಲಿ. ಈ ವಿಷಯದಲ್ಲಿ ಅವರ ಒಂದು ವಾದದ ಸರಣಿಯನ್ನು ತೆಗೆದುಕೊಂಡು ನೋಡುವಾಗ ಯಾರೂ ಪೋಲೀಸರು ಅತಿರೇಕಕ್ಕೆ ಹೋಗಿದ್ದಾರೆಂದು ದೂಷಣೆ ಮಾಡಿಲ್ಲ. ಅದೇ ರೀತಿ ರೈತರ ಪರವಾಗಿ ಚಳುವಳಿ ಬಗ್ಗೆ ಹೇಳುವಾಗ ಅವರೂ ಸಹಾ ಈ ಒಂದು ದುರ್ಘಟನೆಗೆ ಕಾರಣವಾಗಿದ್ದಾರೆಂದು ಹೇಳುವುದು ಕಷ್ಟವಿದೆ. ವಿದ್ಯಾರ್ಥಿಗಳು ಮುಷ್ಕರವನ್ನು ಮಾಡುತ್ತಿದ್ದಾಗ ಕೆಲವು ಜನ ಮಧ್ಯವರ್ತಿಗಳು ಗುಂಪಿನಲ್ಲಿ ಸೇರಿಕೊಂಡು ಕಲ್ಲುಗಳನ್ನು ತೂರುವಂತೆ ಇಲ್ಲೂ ಯಾರಾದರೂ ಮಧ್ಯೆ ಪ್ರವೇಶ ಮಾಡಿ ಈ ಒಂದು ಘಟನೆಗೆ ಕಾರಣವಾಗಿರಬಹುದು ಎಂಬ ಧಾಟಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ರೈತರದೂ ಒಂದು ರೀತಿಯಲ್ಲಿ ಸರಿ ಇದೆ ಹಾಗೂ ಪೋಲೀಸಿನವರದೂ ಒಂದು ರೀತಿಯಲ್ಲಿ ಸರಿ ಇದೆ, ಅಂತೂ ಇಲ್ಲಿ ಘಟನೆ ನಡೆದಿದೆ. ಇಲ್ಲಿ ಯಾರ ಪ್ರತಿಷ್ಠೆ ಇದೆ ಎಂಬುದು ಗೊತ್ತಾಗುತ್ತಾ ಇಲ್ಲ. ಇದನ್ನು ತಿಳಿಯಬೇಕಾದರೆ ಅದನ್ನು ವಿಚಾರಣೆ ಮಾಡಿದರೆ ಗೊತ್ತಾಗುತ್ತದೆ. ಹಿಂದೆ ಒಂದು ಸಮಸ್ಯೆ ಬಂದಾಗ ಇದೇ ಮನೆಯಲ್ಲಿ ಬೇಕಾದಷ್ಟು ಚರ್ಚೆ ಆಯಿತು. ಆ ವಿಷಯವನ್ನು ಸಭೆಯ ಗಮನಕ್ಕೆ ಈಗ ತರುತ್ತೇನೆಂದು. ಆಗ ಶ್ರೀ ನಿಜಲಿಂಗಪ್ಪ ಅವರು ಮುಖ್ಯ ಮಂತ್ರಿಗಳಾಗಿದ್ದರು. ರಾಮರಾಯರು ಎಂಬುವವರು ಹೋಂ ಮಿನಿಸ್ಟರ್ ಆಗಿದ್ದರು. ಆಗ ಮಧುಗಿರಿಯಲ್ಲಿ ಒಂದು ಪ್ರಕರಣ ನಡೆಯಿತು. ಅಲ್ಲಿಯ ಪ್ರಕರಣದಲ್ಲಿ ಪೋಲೀಸಿನವರು ಹೋಗಿ ಅತಿರೇಕದಿಂದ ವರ್ತಿಸಿದ್ದಾರೆಂದು ಇಲ್ಲಿ ಒಂದು ದೊಡ್ಡ ಆಂದೋಳನವೇ ನಡೆಯಿತು. ವಿರೋಧ ಪಕ್ಷದವರಿಂದಲೂ ಹಾಗೂ ಕೆಲವು ಆಡಳಿತ ಪಕ್ಷದ ಸದಸ್ಯರಿಂದಲೂ ಈ ಬಗ್ಗೆ ಚರ್ಚೆ ನಡೆಯಿತು. ಕೊನೆಗೆ ನ್ಯಾಯಾಂಗ ತನಿಖೆ ಆಗಿ ಅದರ ವರದಿ ಸದನದ ಮುಂದೆ ಬಂತು. ಆ ವರದಿಯಲ್ಲಿ ಪೋಲೀಸಿನವರದು ಯಾವುದೇ ತಪ್ಪು ಇಲ್ಲ ಎಂದು ಬಂತು. ಪೋಲೀಸಿನವರ ಒಂದು ತಪ್ಪನ್ನು ಕಂಡು ಹಿಡಿಯುವುದಕ್ಕೆ ನ್ಯಾಯಾಂಗ ತನಿಖೆ ಆಗಬೇಕೆಂದು ನಾವು ಕೇಳುತ್ತಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳು ತಪ್ಪು ತಿಳಿಯಬಾರದು. ಅಂತೂ ಇಲ್ಲಿ ಘಟನೆ ನಡೆದಿದೆ ಇಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ ಅವರನ್ನು ಕಂಡು ಹಿಡಿಯಬೇಕಾದರೆ ನ್ಯಾಯಾಂಗ ತನಿಖೆ ಆಗಲೇ ಬೇಕು. ಪೋಲೀಸಿನವರು ತಮ್ಮ ಕೆಲಸವನ್ನು ಸರಿಯಾಗಿ ನಡೆಸಿದ್ದರೆ ಅವರ ಮೇಲೆ ತಪ್ಪು ಏಕೆ ಬರುತ್ತದೆ? ಇಲ್ಲಿ ರೈತರದೂ ತಪ್ಪು ಇಲ್ಲ, ಪೋಲೀಸಿನವರದೂ ತಪ್ಪು ಇಲ್ಲ. ಅಂತೂ ಘಟನೆ ನಡೆದಿರಬೇಕಾದರೆ ಇದರ ಪ್ರಚೋದನೆಗೆ ಯಾರು ಕಾರಣರು ಎನ್ನುವ ಪ್ರಶ್ನೆ ಇಲ್ಲಿ ಬರುತ್ತದೆ. ಅವರು ಯಾರು ಎಂಬುದನ್ನು ಕಂಡು ಹಿಡಿಯುವವರು ಯಾರು? ಇದನ್ನು ಕಂಡು ಹಿಡಿಯಬೇಕೆಂದು ನಿಮಗೂ ಇಷ್ಟ ಇದೆ ಎಂದು ನನ್ನ ಭಾವನೆ. ಹಾಗಿದ್ದರೆ ಇವತ್ತೇ ಈ ಸಮಸ್ಯೆಯನ್ನು ತೀರ್ಮಾನ ಮಾಡಬೇಕೆಂದು ಹೇಳುವವನು ನಾನಲ್ಲ. ಈಗಲೇ ಮಾಡಿ ಎಂದು ಹೇಳುತ್ತಾ ಇಲ್ಲ. ನೀವು ಘಟನೆ ನಡೆದ ಸ್ಥಳಕ್ಕೆ ಹೋಗುತ್ತಿದ್ದೀರಿ, ಸಂತೋಷ. ನಿಮ್ಮ ಜೊತೆ ಯಾರು ಬರುತ್ತಾರೋ ಅವರನ್ನೆಲ್ಲಾ ಕರೆದುಕೊಂಡು ಹೋಗಿ. ನಾವೂ ಕೂಡ ನಮ್ಮ ಕಡೆಯ ಕೆಲವರನ್ನು ಅಲ್ಲಿಗೆ ಕಳುಹಿಸಿ ಕೊಡುತ್ತೇವೆ. ಏಕೆಂದರೆ ಅಲ್ಲಿನ ಜನರು ಆಡಳಿತ ಮತ್ತು ವಿರೋಧ ಪಕ್ಷದವರು ಒಟ್ಟಿಗೆ ಸಮೀಕ್ಷೆ ನಡೆಸಿದಾಗ ಎಷ್ಟೋ ಸಂಗತಿಗಳನ್ನು ಹೇಳುವುದಿಲ್ಲ. ಆದ್ದರಿಂದ ನೀವು ಬೇಕಾದವರನ್ನು ಕರೆದುಕೊಂಡು ಹೋಗಿ, ನಾವೂ ನಮ್ಮ ಕಡೆಯವರನ್ನು ಕಳುಹಿಸಿ ನಮ್ಮ ವರದಿಯನ್ನು ತರಿಸುತ್ತೇವೆ. ನಾವೂ ವರದಿಯನ್ನು ತಂದು ಇಡುತ್ತೇವೆ. ಆಗ ನಿಮ್ಮ ನಮ್ಮ ವರದಿಗಳು ಹೇಗಿರುತ್ತವೋ ಎಂಬುದನ್ನು ತಾಳೆ ನೋಡೋಣ, ನೀವು ಇದಕ್ಕೆ ಹೌಸ್ ಕಮಿಟಿ ಯಾಕೆ ಬೇಕು ಎಂದು ಕೇಳುತ್ತಿದ್ದೀರಿ. ನಾವು ಕಮಿಟಿ ಮಾಡಿದರೆ ಒಳ್ಳೆಯದು ಎಂದು ಹೇಳು

ತ್ತಿದ್ದೇವೆ. ಹಿಂದೆ ಒಂದು ಸಾರಿ ೧೯೭೩–೭೪ರಲ್ಲಿ ಕ್ಷಾಮಡಾಮಾರಗಳ ವಿಚಾರ ಬಂದಾಗ, ಹಣ ಪೋಲಾಗಿದೆ ಎಂದು ಸುದ್ದಿಗಳು ಬಂದಾಗ ಏಕ ಸದಸ್ಯ ಸಮಿತಿಯನ್ನು ಮಾಡಿ ಅದಕ್ಕೆ ಶ್ರೀಮಾನ್ ಆರ್ಮುಗಮ್ ಅವರನ್ನು ನೇಮಿಸಿದಾಗ ಅವರು ವಿಚಾರಣೆ ನಡೆಸಿ ಒಂದು ವರದಿಯನ್ನು ತಂದು ಸಭೆಯ ಮುಂದೆ ಇಟ್ಟರು. ಆಗ ಎಲ್ಲರಿಗೂ ಅರ್ಥವಾಯಿತು. ಆಗ ಶ್ರೀ ಆರ್ಮುಗಮ್ ಅವರು ವಿರೋಧಪಕ್ಷದಲ್ಲಿಯೇ ಇದ್ದರು. ಆ ಬಗ್ಗೆ ಸತ್ಯಾಂಶವನ್ನೆಲ್ಲಾ ವರದಿಯಲ್ಲಿ ಅವರು ಹೇಳಿದ್ದರು. ತಪ್ಪಿತಸ್ಥರಿಗೆ ಶಿಕ್ಷೆ ಮಾಡೋಣ ಎಂಬ ಉದ್ದೇಶದಿಂದಲೇ ಮಾಡಿದ್ದು. ತಮಗೂ ಆ ಉದ್ದೇಶ ಇದೆ ಎಂದು ನಾನು ತಿಳಿದುಕೊಂಡೇ ಈ ವಿಷಯವನ್ನು ಹೇಳುತ್ತಿದ್ದೇನೆ. ಇಲ್ಲಿ ನಾವು ನೀವು ಎಲ್ಲಾ ಕುಳಿತು ಚರ್ಚಿಸಬೇಕಾದ ವಿಷಯವಿದೆಯೆಂದು ಬರೀ ಮಾತಿನಲ್ಲಿ ಹೇಳಬೇಡಿ. ಕೃತಿಯಲ್ಲಿ ಮಾಡಿ ತೋರಿಸಿ, ಬಹಳ ಪ್ರೀತಿಯಿಂದ "ಏನಪ್ಪ ಚೆನ್ನಾಗಿದ್ದೀಯಾ ಊಟಾ ಆಯಿತೇ" ಎಂದು ಕೇಳುವ ಬದಲು ಆತನಿಗೆ ಊಟವನ್ನು ಹಾಕುವುದಿದ್ದರೆ ಹಾಕಿ ಇಲ್ಲದಿದ್ದರೆ ಈ ಪ್ರೀತಿಯ ಮಾತುಗಳಿಂದ ಏನೂ ಪ್ರಯೋಜನ ಇಲ್ಲ. ಕೃತಿಯಲ್ಲಿ ತೋರಿಸಬೇಕೆಂದರೆ ಹೌಸ್ ಕಮಿಟಿ ಮಾಡಿ? ಏನಿದೆ ಅದರಲ್ಲಿ? ಅದನ್ನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರೆ ನೀವು ಹೋಗಿ ನೋಡಿಕೊಂಡು ಬನ್ನಿ. ಮಧ್ಯಾಹ್ನ ೨ ಗಂಟೆಯ ಒಳಗೆ ಬಂದುಬಿಡಬಹುದು. ಹೆಲಿಕಾಪ್ಟರ್‌ನಲ್ಲಿ ೪ ಜನರು ಕುಳಿತು ಹೋಗಬಹುದು. ನಮ್ಮ ಕಡೆಯವರು ಬಂದರೂ ಕರೆದುಕೊಂಡು ಹೋಗಿ. ಅವರು ಹೋದರೂ ಅಡ್ಡಿ ಇಲ್ಲ. ನಾವೂ ವಿರೋಧ ಪಕ್ಷದ ಕೆಲವು ಜನರನ್ನು ಕಳುಹಿಸಿಕೊಡುತ್ತೇವೆ, ಅವರೂ ಕೂಡ ನೋಡಿಕೊಂಡು ಬರುತ್ತಾರೆ. ನಮ್ಮದೂ ವರದಿ ಬರುತ್ತದೆ. ನಮ್ಮ ವರದಿ ಏನು ಹೇಳುತ್ತದೆ ಹಾಗೂ ನಿಮ್ಮ ವರದಿ ಏನು ಹೇಳುತ್ತದೆ ಅವು ಬಂದ ಮೇಲೆ ನೋಡೋಣ. ಆದರೆ ಅಲ್ಲಿಯವರೆಗೆ ಈ ಸಮಸ್ಯೆಯ ಬಗ್ಗೆ ಆಖೈರಾಗಿ ಏನೂ ಮಾಡುವುದಿಲ್ಲವೆಂದು ಹೇಳುವುದಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ.

† ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ ಗ್ರಾಮಾಂತರ).—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಮಾಡಿ ಕೊಟ್ಟಂಥ ವಿವರಣೆಗಳನ್ನು ಕೇಳಿದ್ದೇನೆ. ಈ ಘಟನೆಯು ನಡೆಯುವುದಕ್ಕೆ ಅವರ ಹಿನ್ನೆಲೆಯನ್ನೂ ಕೂಡ ಹೇಳಿದ್ದಾರೆ. ಅದನ್ನು ನಾನು ಈ ಸಂದರ್ಭದಲ್ಲಿ ವಿವರವಾಗಿ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ಇದರ ಹಿನ್ನೆಲೆಯ ವಿಚಾರವಾಗಿ ಹೇಳುವುದಾದರೆ ಅದಕ್ಕೆ ಬಹಳಷ್ಟು ಸಮಯ ಬೇಕಾಗುತ್ತದೆ. ರೈತರು ಕಳೆದ ನಾಲ್ಕು ವರ್ಷಗಳಿಂದ ಶಾಂತಿಯಿಂದ ಸಂಘಟಿತರಾಗಿ ಚಳುವಳಿಯನ್ನು ಮಾಡಿದ್ದಾರೆ. ಅನಂತರ ಮನವಿಗಳನ್ನೂ ಸಹ ಮಾನ್ಯ ಮಂತ್ರಿಗಳನ್ನು ಕಂಡು ಕೊಟ್ಟಿರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಹೇಳಿದ್ದಾರೆ, ಬೆಟರ್‌ಮೆಂಟ್ ಲೆವಿ ಮತ್ತು ವಾಟರ್ ರೇಟ್ ವಸೂಲು ಮಾಡತಕ್ಕಂಥ ನೀತಿ ಇರುತ್ತದೆ, ಅದನ್ನು ವಸೂಲು ಮಾಡಬೇಕು. ಸರ್ಕಾರ ನಡೆಯಬೇಕಾದರೆ ಕೋಟ್ಯಾಂತರ ರೂಪಾಯಿ ಖರ್ಚುಮಾಡಿ ನೀರನ್ನು ಕೊಡತಕ್ಕಂಥ ವ್ಯವಸ್ಥೆ ಇರುವಾಗ ಅದನ್ನು ವಸೂಲು ಮಾಡತಕ್ಕಂಥದ್ದು ಒಂದು ದೊಡ್ಡ ವಿಚಾರವಾಗಿಯೇ ಇರುತ್ತದೆ. ಅಣೆಕಟ್ಟು ಕಟ್ಟಲು ೧೭೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿರುತ್ತೇವೆ, ಅದಕ್ಕೆ ೫೮ ಕೋಟಿ ರೂಪಾಯಿಗಳು ಬಡ್ಡಿಯೇ ಬರಬೇಕಾಗಿರುತ್ತದೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ತಾವು ಹೇಳತಕ್ಕಂಥದ್ದು ಸರಿಯಾಗಿಯೇ ಇರುತ್ತದೆ. ಆದರೆ ನಾನು ಹೇಳುತ್ತಿದ್ದೇನೆ ೧೭೮ ಕೋಟಿ ರೂಪಾಯಿಗಳನ್ನು ಸರಿಯಾದ ರೀತಿಯಲ್ಲಿ ಖರ್ಚನ್ನು ಮಾಡಲು ಆಪೇಕ್ಷಿತ ವ್ಯವಸ್ಥೆಯನ್ನು ನಡೆಸಿದ್ದರೆ ೧೦೦ ಕೋಟಿ ರೂಪಾಯಿಗಳಷ್ಟು ಉಳಿತಾಯವಾಗುತ್ತಿತ್ತು, ಅದು ಬೇರೆ ವಿಚಾರ. ತಾವು ಹೇಳಿದ ಹಾಗೆ ಎಸ್ಟಿಮೇಟ್ ಆದದ್ದು ೫೨ ಕೋಟಿ ರೂಪಾಯಿಗಳಿಗೆ, ಆದರೆ ಖರ್ಚು ಆಗಿರತಕ್ಕಂಥದ್ದು ೧೭೨ ಕೋಟಿ ರೂಪಾಯಿಗಳು. ಇದು ಹೀಗಾಗುವುದಕ್ಕೆ ಕಾರಣವೇನು ಎನ್ನುವುದನ್ನು ಈಗ ಚರ್ಚೆ ಮಾಡುವುದು ಬೇಡ. ಆವತ್ತಿನ ದಿವಸ ಅಧಿಕಾರಿಗಳು, ರಾಜಕಾರಣಿಗಳು ಕೂಡ ಸೇರಿ ಈ ಅಣೆಕಟ್ಟನ್ನು ಕಟ್ಟುವುದರಲ್ಲಿ ದುರ್ವ್ಯವಹಾರ ಮಾಡಿರತಕ್ಕಂಥವಕ್ಕೆ ರೈತ ಕೊಡಬೇಕಾಗಿರುತ್ತದೆ. ಅದು ಚರ್ಚೆ ಬೇಡ. ಈವತ್ತು ಪ್ರಶ್ನೆ ಏನು ಇದೆ ಎಂದರೆ ನೆನ್ನೆ ದಿವಸ ನಡೆದಂಥ ಘಟನೆಯ ಹಿನ್ನೆಲೆಯಲ್ಲಿ ಆಳವಾಗಿ ಚಿಂತಿಸಿ ಸಮಸ್ಯೆಯನ್ನು ಪರಿಹಾರ ಮಾಡಬೇಕಾಗಿದೆ ಎಂದು ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಈಗ ಈ ಘಟನೆಯ ಬಗ್ಗೆ ಪೋಲೀಸಿನವರು ಕೊಟ್ಟಂಥ ವರದಿಯನ್ನು ಮಾನ್ಯ ಮುಖ್ಯಮಂತ್ರಿಗಳು ಇಟ್ಟಿದ್ದಾರೆ. ಸ್ವಾಭಾವಿಕವಾಗಿ ಅಧಿಕಾರಿಗಳು ಕೊಟ್ಟಂಥ ವರದಿಯನ್ನು ಇಟ್ಟಿದ್ದಾರೆ. ನಾವು ಕೂಡ ಸಂಬಂಧಪಟ್ಟಂಥ ಎಲ್ಲ ಸ್ಥಾನಿಕ ಮುಖಂಡರುಗಳನ್ನು ಕಂಡು ಸಂಪರ್ಕವನ್ನು ಬೆಳೆಸಿದ್ದೇವೆ. ಅವರು ಹೇಳತಕ್ಕಂಥ ವಿಚಾರವೇ ಬೇರೆ ಇರುತ್ತದೆ. ತಾವು ಎಲ್ಲೆಲ್ಲಿ ಪೋಲೀಸಿನವರು ಗಾಯಗೊಂಡಿ

ದ್ದಾರೆ, ಎಷ್ಟು ಜನ ಪೋಲೀಸ್‌ನವರು ಗಾಯಗೊಂಡಿದ್ದಾರೆ ಎನ್ನುವುದನ್ನೆಲ್ಲ ಹೇಳಿದ್ದೀರಿ. ಪೋಲೀಸಿನವರ ಒಂದು ಲಾಟಿ ಛಾರ್ಜಿನಿಂದ ಕಲಬುರ್ಗಿಯಲ್ಲಿ ಬೇರೆ ಬೇರೆ ರೀತಿಯಲ್ಲಿ ಸಾರ್ವಜನಿಕರಲ್ಲಿ ಎಷ್ಟು ಜನರು ಗಾಯಗೊಂಡಿದ್ದಾರೆಂಬುದಕ್ಕೆ ತಮ್ಮ ಕಡೆಯಿಂದ ಯಾವುದೇ ಅಂಕಿ ಸಂಖ್ಯೆಗಳು ಬರಲಿಲ್ಲ. ಎಷ್ಟು ಜನ ಗಾಯಗೊಂಡಿದ್ದಾರೆ, ಎಷ್ಟು ಜನ ಯಾವ ಯಾವ ರೀತಿಯಲ್ಲಿ ಗಾಯಗೊಂಡಿದ್ದಾರೆ, ಎಲ್ಲೆಲ್ಲಿ ಕದ್ದು ಹೋಗಿದ್ದಾರೆ, ಎಲ್ಲೆಲ್ಲಿ ಅಡಗಿಕೊಂಡಿದ್ದಾರೆ ಇದರ ಲೆಕ್ಕಾಚಾರ ಒಂದೂ ಕೊಟ್ಟಿಲ್ಲ. ಈ ಘಟನೆಯ ಬಗ್ಗೆ ಯಾವ ವಿಧವಾದ ಪ್ರಚೋದನೆಯೂ ಇಲ್ಲ ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಆದರೆ ಈವತ್ತು ಯಾರು ಪ್ರಚೋದನೆ ಮಾಡಿದರು, ಯಾವ ಕಾಲಕ್ಕೆ ಘಟನೆ ಆಯಿತು ಆದರ ಬಗ್ಗೆ ವಿವರಗಳು ಸಂಪೂರ್ಣವಾಗಿ ಸಿಕ್ಕಿಲ್ಲ ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಇರತಕ್ಕಂಥ ಸಂಗತಿ ಎಂದರೆ ನಾಲ್ಕಾರು ವರ್ಷಗಳಿಂದ ಸ್ಟ್ರೈಕ್ ಮಾಡುತ್ತೇವೆಂದು ಹೇಳಿ ಸರ್ಕಾರಕ್ಕೆ ತಿಳಿಸಿ, ಬರೆದೂ ಸಹ ಕೊಟ್ಟು, ಮೆರವಣಿಗೆಯನ್ನು ಮಾಡತಕ್ಕಂಥ ಸಮಯದಲ್ಲಿ ಇಂಥ ದುರ್ಘಟನೆ ನಡೆದಿರುತ್ತದೆ. ಇದರ ಬಗ್ಗೆ ಇಲಾಖಾ ವಿಚಾರಣೆ ಸಾಕು, ನ್ಯಾಯಾಂಗ ವಿಚಾರಣೆ ಬೇಡವೆಂದು ಹೇಳುತ್ತಿರುತ್ತೀರಿ. ಪೋಲೀಸ್ ಅಧಿಕಾರಿಗಳು ನ್ಯಾಯವಾಗಿ ವಿಚಾರಣೆ ಮಾಡಲು ಸಾಧ್ಯವೇ ಇಲ್ಲ. ಪೋಲೀಸ್ ಅಧಿಕಾರಿಗಳು ಸಾಧ್ಯವಾದಷ್ಟು ಅವರ ಮೇಲೆಯೇ ಹೇಳತಕ್ಕಂಥ ಪ್ರಸಂಗ ಬರುತ್ತದೆ. ಆದ್ದರಿಂದ ಇಂಥ ಸಂಗತಿಯನ್ನು ನ್ಯಾಯಾಂಗದಿಂದಲೇ ವಿಚಾರಣೆಯನ್ನು ಮಾಡಿಸತಕ್ಕಂಥದ್ದು ಬಹಳ ಅವಶ್ಯಕತೆ ಇರುತ್ತದೆ. ತಾವು ನ್ಯಾಯಾಂಗ ವಿಚಾರಣೆಯ ಅವಶ್ಯಕತೆ ಇಲ್ಲ ಎಂದ ಮೇಲೆ ಅದರ ಹಿನ್ನೆಲೆ ಏನು ಎನ್ನತಕ್ಕಂಥದ್ದನ್ನು ಹೇಳುತ್ತಾ ಇಲ್ಲ. ಆದರೆ ಇಲ್ಲಿ ಸಾರ್ವಜನಿಕರು ಒಂದು ಶಾಂತ ರೀತಿಯಿಂದ ಚಳುವಳಿಯನ್ನು ಮಾಡುತ್ತಿರುವುದನ್ನು ಬಿಟ್ಟು ರಸ್ತೆಗೆ ಬರಬೇಕಾದರೆ ಏನೂ ಪ್ರಚೋದನೆ ಇಲ್ಲದೆ ಈ ರೀತಿ ಆಯಿತೆ ಎನ್ನುವುದು ಪ್ರಶ್ನೆ ಬರುತ್ತದೆ. ಅದಕ್ಕಾಗಿ ವಿವರಗಳು ಚರ್ಚೆಗೆ ಬಂದರೆ ತಾವು ಹೇಳುವ ರೀತಿನೀತಿಗಳು, ನಾವು ಹೇಳುವ ರೀತಿನೀತಿಗಳು ಸರ್ಕಾರದ ಮುಂದೆ ಬಂದು ತೀರ್ಮಾನವಾಗಲಿ. ಆದುದರಿಂದ ದಯವಿಟ್ಟು ತಾವು ಜ್ಯುಡಿಷಿಯಲ್ ಪ್ರೋಬ್ ಮಾಡುವ ವಿಚಾರದ ಬಗ್ಗೆ ತಾವು ಸ್ಥಳಕ್ಕೆ ಭೇಟಿ ಕೊಟ್ಟು ಬಂದ ಮೇಲೆ ಪುನಃ ಚರ್ಚೆಯಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳೋಣ. ವಿಶಾಲ ಹೃದಯದಿಂದ ವಿರೋಧ ಪಕ್ಷದ ನಾಯಕರು ಕೂಡ ಅರ್ಥ ಮಾಡಿಕೊಂಡಿದ್ದಾರೆ. ಆದ್ದರಿಂದ ತಾವು ಜ್ಯುಡಿಷಿಯಲ್ ಪ್ರೋಬ್ ಮಾಡುವುದಕ್ಕೆ ತಯಾರಾಗಿದ್ದೀರಿ ಎಂದು ನಾವು ತಿಳಿದುಕೊಂಡಿದ್ದೇವೆ

ತಾವು ನಾಲ್ಕಾರು ಜನರನ್ನು ಕರೆದುಕೊಂಡು ಹೋಗಿ ಪ್ರತ್ಯಕ್ಷವಾಗಿ ನೋಡಿಕೊಂಡು ಬರುವ ಬಗ್ಗೆ ಹೇಳಿದಿರಿ. ಅದಕ್ಕೆ ನನ್ನ ಸಲಹೆ ಎಂದರೆ ಈ ಮನೆಯ ಮಾನ್ಯ ಸದಸ್ಯರನ್ನು ಒಳಗೊಂಡು ಒಂದು ಸಮಿತಿಯನ್ನು ಕಳುಹಿಸಿ ಅವರು ನೋಡಿಕೊಂಡು ಬಂದು ರಿಪೋರ್ಟ್ ಕೊಡಲಿ. ಕೇವಲ ನ್ಯಾಯಾಂಗ ತನಿಖೆಗೆ ನ್ಯಾಯಾಧೀಶರನ್ನು ನೇಮಕ ಮಾಡತಕ್ಕಂಥ ವಿಚಾರದಲ್ಲೂ ಕೂಡ ಟೈಮ್ ತೆಗೆದುಕೊಳ್ಳುತ್ತದೆ. ನನಗೆ ಬಂದಿರತಕ್ಕಂಥ ವರದಿ ಪ್ರಕಾರ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಕೊಲೆಯಾಗಿದೆ ಎಂದರೆ ಜನ ಈವತ್ತು ಯಾರು ಯಾರು ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆಂಬುದನ್ನು ಹುಡುಕಿ ಅವರನ್ನು ಹಿಡಿದು ತರತಕ್ಕಂಥ ಪ್ರಯತ್ನ ನಡೆಯಬೇಕಾಗಿದೆ. ನಾಲ್ಕಾರು ಹಳ್ಳಿಗಳಲ್ಲಿ ಭಯಾನಕ ವಾತಾವರಣ ಉಂಟಾಗಿದ್ದು ಜನರು ಬಹಳ ಅಂಜುತ್ತಿದ್ದಾರೆ. ಅಧಿಕಾರಿಗಳು ಯಾವ ಹೊತ್ತಿನಲ್ಲಿ ಏನು ಮಾಡುತ್ತಾರೋ ಎನ್ನುವ ಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ತಾವು ಹೇಳುತ್ತಾ ಇದ್ದೀರಿ ಅಧಿಕಾರಿಗಳೂ ಅಂಜಿದ್ದಾರೆ. ಆಫೀಸರ್‌ಗಳು ಡಿಮಾರ್‌ಲೈಸ್ ಆಗಿದ್ದಾರೆ ಎನ್ನುವ ಮಾತನ್ನು ತಾವು ಹೇಳಿದಿರಿ. ಅಧಿಕಾರಿಗಳು ಈ ಘಟನೆಯಲ್ಲಿ ತಮ್ಮ ಕರ್ತವ್ಯವನ್ನು ಮಾಡತಕ್ಕಂಥ ಸಮಯದಲ್ಲಿ ಅಧಿಕಾರಿಗಳ ಬಗ್ಗೆ ಸಹಾನುಭೂತಿಯಿಂದ ಹೇಳತಕ್ಕಂಥದ್ದು ಅದು ಆಗಕೂಡದು. ಸಾರ್ವಜನಿಕರೂ ಕೂಡ ಒಂದು ರೀತಿ ಈ ಸ್ಥಿತಿಯಲ್ಲಿ ನಡೆದುಕೊಂಡ ಬಗ್ಗೆ ಪೋಲೀಸ್ ಇನ್‌ಸ್ಪೆಕ್ಟರ್‌ನ್ನು ಕೊಲೆ ಮಾಡಿದ್ದು ಸಮರ್ಥನೆ ಮಾಡಬೇಕು. ಯಾರು ತಪ್ಪಿತಸ್ಥರಿರುತ್ತಾರೆ ಅವರಿಗೆ ಶಿಕ್ಷೆ ಮಾಡಬೇಕು. ಅಧಿಕಾರಿಗಳು ಡಿಮಾರಲೈಸ್ ಆಗತಕ್ಕಂಥದ್ದಕ್ಕೆ ಕಾರಣವಿಲ್ಲ. ಈ ಒಂದು ಸಮಯದಲ್ಲಿ ಕೊಲೆಗಾರರಿಂದಲೇ ಬೇಕೂಂತ ಒಂದು ರೀತಿಯಲ್ಲಿ ಘಟನೆಯಾಗಿರಬಹುದು. ಪೋಲೀಸ್ ಫೋರ್ಸಸ್ ಹಾಕಿ. ಬೇಕಾದಷ್ಟು ರಿಸರ್ವ್ ಪೋಲೀಸ್ ದೊಡ್ಡ ದೊಡ್ಡ ಅಧಿಕಾರಿಗಳು ಆಫೀಸರನ್ನು ಹಾಕಿ ಅವರ ಜೊತೆಯಲ್ಲಿ ಸುತ್ತಾಡುವಾಗ ಅವರಿಗೆ ಡಿಮಾರಲೈಸ್ ಆಗತಕ್ಕಂಥದ್ದಕ್ಕೆ ಕಾರಣವಿಲ್ಲ. ಈವತ್ತು ಜನತೆಗೆ ಅಂಜಿಕೆ ಉಂಟಾಗಿದೆ. ಅವರಿಗೆ ಒಂದು ರೀತಿಯಾದ ಮನೋಭಾವ ಉಂಟಾಗಿರುತ್ತದೆ. ಆದ್ದರಿಂದ ಸದನದ ಸಮಿತಿಯವರು ಅಧಿಕಾರಿಗಳನ್ನು ಕಂಡು, ಸಾರ್ವಜನಿಕರನ್ನು ಕಂಡು ಸಮಾಧಾನ ಮಾಡಿ, ಅವರಿಗೆ ಧೈರ್ಯ ಕೊಟ್ಟು ಒಂದು ಶಾಂತವಾದ ವಾತಾವರಣವನ್ನು ನಿರ್ಮಾಣ ಮಾಡಲಿಕ್ಕೆ ಅವಕಾಶವಾಗುತ್ತದೆ. ಆ ಒಂದು ದೃಷ್ಟಿಯಿಂದ ಒತ್ತಾಯ

ಮಾಡುತ್ತಿದ್ದೇನೆ. ಸದನದ ಸಮಿತಿಯನ್ನು ಮಾಡಲಿಕ್ಕೆ ತಾವು ಒಪ್ಪಿಕೊಳ್ಳಬೇಕು. ಹಿಂದೆ ನಡೆದಂಥ ಮಧುಗಿರಿ ಪ್ರಕರಣದಲ್ಲಿ ಅದರ ವಿಚಾರವಿರಲಿ, ಇಂಥ ಸಮಯದಲ್ಲಿ ತಾವು ಸಹಕಾರ ಕೇಳುತ್ತಾ ಇದ್ದೀರಿ. ನಾವು ಸಹಕಾರ ಕೊಡುತ್ತಾ ಇದ್ದೇವೆ. ಆದರೂ ಈ ವಿಚಾರದಲ್ಲಿ ಸದನದ ಸಮಿತಿಯನ್ನು ನೇಮಕ ಮಾಡಿ ಕಳುಹಿಸಿಕೊಡತಕ್ಕಂಥದ್ದಕ್ಕೆ ಹಿಂದೇಟು ಹಾಕುತ್ತಾ ಇರತಕ್ಕಂಥದ್ದು ನನಗೆ ಗೊತ್ತಿಲ್ಲ. ಜ್ಯುಡಿಷಿಯಲ್ ಪ್ರೋಬ್ ನಿರ್ಣಯ ತೆಗೆದುಕೊಂಡು ಚರ್ಚೆ ಮಾಡಬೇಕು ಮಾಡಬಾರದು ಎನ್ನುವದಕ್ಕೂ ಕೂಡ ಈ ಸದನದ ಸಮಿತಿಯನ್ನು ಮಾಡಲಿಕ್ಕೆ ತಾವು ಒಪ್ಪಬೇಕೆಂದು ಹೇಳುತ್ತೇನೆ.

ತಮಗೆ ಉದಾಹರಣೆಗೆ ಹೇಳುವುದಾದರೆ ಇತ್ತೀಚೆಗೆ ಪಾರ್ಲಿಮೆಂಟ್ ಸದಸ್ಯರನ್ನು ಅಸ್ಸಾಂಗೆ, ಬಾಗಪಟ್‌ಗೆ ಕಳುಹಿಸಿಕೊಟ್ಟಿದ್ದಾರೆ. ಅಲ್ಲಿ ನಡೆದಂಥ ಉದಾಹರಣೆ ಇದೆ. ಹಿಂದೆ ಅವರು ಮಾಡಿಲ್ಲ, ಇವರು ಮಾಡಿಲ್ಲ ಎಂದು ನೀವು ಹೇಳುವುದು ಬೇಡ, ತಾವು ಈರೀತಿ ಮಾಡುವುದರಿಂದ ಸಾರ್ವಜನಿಕರಲ್ಲಿ ಶಾಂತಿ, ಸಮಾಧಾನ ಉಂಟಾಗುವುದರ ಜೊತೆಗೆ ವಾತಾವರಣವೂ ಕೂಡ ತಿಳಿಯಾಗುತ್ತದೆ. ತಾವು ಈಗ ಸದನದ ಒಂದು ಸಮಿತಿಯನ್ನು ಅಲ್ಲಿಗೆ ಕಳುಹಿಸಿಕೊಡುವುದು ಉತ್ತಮ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಮಾನ್ಯ ಬೊಮ್ಮಾಯಿಯವರು ಹೇಳಿದ್ದನ್ನು ನಾನು ಕೇಳಿದೆ. ನನ್ನ ನಿಲುವನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಈ ಹಿನ್ನೆಲೆಯಲ್ಲಿ ನ್ಯಾಯಾಂಗ ತನಿಖೆ ವಿಚಾರ ಉದ್ಭವವಾಗುವುದಿಲ್ಲ, ಪೋಲೀಸರಿಂದ ಹೆಚ್ಚಿನ ಪ್ರಚೋದನೆ ಹೇಗೆ ಆಯಿತು ಎಂಬುದನ್ನು ಕಂಡುಹಿಡಿಯಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಇದಕ್ಕೆ ಬೇಕಾದಷ್ಟು ಆಧಾರಗಳಿವೆ. ಪೋಲೀಸರನ್ನು ಇಟ್ಟು ವಿಚಾರಣೆ ಮಾಡಬೇಕೆಂದು ಏನೂ ಇಲ್ಲ. ಈ ಹಿನ್ನೆಲೆಯಲ್ಲಿ ನಾನು ಏನನ್ನೂ ಹೇಳುವುದಕ್ಕೆ ತಯಾರಿಲ್ಲ. ಮೊದಲು ನಾನು ಅಲ್ಲಿಗೆ ಹೋಗಿಬಂದು ಅನಂತರ ತಮ್ಮ ಮುಂದೆ ವಿವರಗಳನ್ನು ಇಡುತ್ತೇನೆ.

ಇನ್ನು ಎರಡನೆಯದಾಗಿ, ಹಿಂದೆ ಸಚಿವರಾಗಿದ್ದ ಮಾನ್ಯ ರಾಮರಾವ್‌ರವರ ಕಾಲದ ಕಥೆಯನ್ನು ಹೇಳಿದರು. ಆ ರಾಮರಾಯರ ಮೇಲೆ ಏನೇನು ಆರೋಪಣೆಗಳನ್ನು ಮಾಡಲಾಯಿತು ಎಂಬುದು ನನಗೆ ಗೊತ್ತು. ನೆಪಕ್ಕೆ ಯಾವುದೋ ಒಂದು ವಿಚಾರವನ್ನು ಮುಂದಿಟ್ಟುಕೊಂಡಿದ್ದರು. ಅದು ಯಾವುದು ಎಂದರೆ ಮಧುಗಿರಿ ಪ್ರಕರಣ. ನಿಜವಾಗಿ ಹೇಳಬೇಕೆಂದರೆ, ಮಾನ್ಯ ರಾಮರಾಯರು ದೇವರಂಥ ಮನುಷ್ಯ. ಅವರ ಕೈಯಲ್ಲಿ ಗೃಹಖಾತೆ ಇದ್ದುದನ್ನು ಯಾವರೀತಿಯಿಂದಲಾದರೂ ತಪ್ಪಿಸಬೇಕೆಂದು ಒಳಗೊಳಗೇ ಒಂದು ದೊಡ್ಡ ಪಿತೂರಿಯೇ ನಡೆದಿತ್ತು. ಅವರನ್ನು ತೆಗೆಯಬೇಕೆಂದು ಎರಡೂ ಕಡೆಯವರು ಸಂಚುಮಾಡಿದ್ದರು. ರಾಮರಾಯರು ಅಷ್ಟೊಂದು ಗಡುಸಾದ ವ್ಯಕ್ತಿಯಾಗಿರಲಿಲ್ಲ. ಬಹಳ ಸರಳ ಸ್ವಭಾವದವರಾಗಿದ್ದರು. ಈಗ ಅವರ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವುದು ಬೇಡ. ಬೇರೆ ಸಂದರ್ಭದಲ್ಲಿ ನಾನೇ ಈ ವಿಚಾರವನ್ನು ಹೇಳುತ್ತೇನೆ. ಅವರು ಒಳ್ಳೆಯ ಹೆಸರನ್ನು ಪಡೆದಿದ್ದ ವ್ಯಕ್ತಿ, ಅವರ ಹೆಸರಿಗೆ ಏನಾದರೂ ಮಾಡಿ ಕಳಂಕ ಹಚ್ಚಬೇಕೆಂದು ಇವರು ಪ್ರಯತ್ನಿಸಿದಾಗ, ಇನ್ನು ನನ್ನ ಹೆಸರಿಗೆ ಕಳಂಕ ಬರುತ್ತದೆಂದು ಅವರು ಹೆದರಿ ತಮ್ಮ ರಾಜೀನಾಮೆಯನ್ನು ಕೊಟ್ಟರು. ತನಿಖೆ ಎಲ್ಲಾ ಮುಗಿದಮೇಲೆ ಅವರು ತಪ್ಪಿತಸ್ಥರಲ್ಲ ಎಂದು ವರದಿ ಬಂತು. ಅನಂತರ ಅವರ ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಂಡರೆ ?

ಶ್ರೀ ಎಸ್. ಆರ್, ಬೊಮ್ಮಾಯಿ.—ಇಲ್ಲಿ ನಿಮ್ಮನ್ನು ರಾಜೀನಾಮೆಯನ್ನು ಕೊಡಿ ಎಂದು ಕೇಳಿದವರು ಯಾರು ?

ಶ್ರೀ ಆರ್. ಗುಂಡೂರಾವ್.—ನೀವೇನೋ ಕೇಳುತ್ತೀರಿ, ಆದರೆ ಕೊಡುವವರು ಯಾರು ? ರಾಜೀನಾಮೆ ಕೊಡುವುದಕ್ಕೆ ರಾಮರಾಯನಲ್ಲ, ನಾನು ಗುಂಡೂರಾವ್,

ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರಿಗೆ ರಾಮರಾಯರ ಬಗ್ಗೆ ಈಗ ಅನುಕಂಪ ಇರಬಹುದು. ನಾನು ಮಾತ್ರ ನನ್ನ ಮನಸ್ಸಿನಲ್ಲಿ ಇದುದ್ದನ್ನು ಓಪನ್ ಆಗಿ ಹೇಳಿದ್ದೇನೆ. ವಿರೋಧ ಪಕ್ಷದ ಸದಸ್ಯರನ್ನು ನೆಪಮಾತ್ರಕ್ಕೆ ಕರೆನಂತೆ ಮಾಡ ಬೇಡಿ, ಯಾವುದನ್ನು ಮಾಡಬೇಕಾದರೂ ಕಾರ್ಯತಃ ಮಾಡಿ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ನಾನಾದರೂ ಹೇಳುವುದಿಷ್ಟು. ನಾನು ಯಾವುದನ್ನೇ ಆಗಲಿ ಕಾರ್ಯತಃ ಮಾಡಿ ತೋರಿಸುತ್ತೇನೆ. ನಾನು ನಾಳೆಯದಿವಸ ಹೇಗಿದ್ದರೂ ಅಲ್ಲಿಗೆ ಹೋಗುತ್ತಿದ್ದೇನೆ. ವಿರೋಧ ಪಕ್ಷದ ಸದಸ್ಯರನ್ನೂ ಕರೆದಿದ್ದೇನೆ. ಹೇಗೂ ಹೆಲಿಕ್ಯಾಪ್ಟರ್‌ನಲ್ಲಿ

ಹೋಗುತ್ತಿದ್ದೇನೆ. ಅವರೂ ಬಂದರೆ ಅವರು ಎಲ್ಲಿ ಹೇಳುತ್ತಾರೋ ಅಲ್ಲಿ ಇಳಿಸಿ ಹೋಗುತ್ತೇನೆ. From my side, I invite anybody who wish to come. They can come back tomorrow to Bangalore. ಇದು ಇಲ್ಲಿ ತೀರ್ಮಾನ ಮಾಡುವುದಲ್ಲ. ಅಲ್ಲಿಗೆ ಹೋಗಿ ವಿಚಾರವನ್ನು ತಿಳಿದು ಬಂದಮೇಲೆ ತೀರ್ಮಾನ ಮಾಡೋಣ ಕಾರ್‌ನಲ್ಲಿ ಹೋಗಿಬರೋಣ ಎಂದರೆ ತಡವಾಗುತ್ತದೆ. ನಾಳೆ ಬೆಳಿಗ್ಗೆ ಇಲ್ಲಿಂದ ಹೆಲಿಕ್ಯಾಪ್ಟರ್‌ನಲ್ಲಿ ಹೋದರೆ ಮಧ್ಯಾಹ್ನದ ಹೊತ್ತಿಗೆ ಅಧಿವೇಶನಕ್ಕೆ ವಾಪಸ್ಸು ಬರಬಹುದು. ಆ ದೃಷ್ಟಿಯಿಂದ ಹೆಲಿಕ್ಯಾಪ್ಟರ್‌ನಲ್ಲಿ ಹೋಗಿಬರೋಣವೆಂದು ನಾನು ಹೇಳುತ್ತಿರುವುದು ನನ್ನ ಜೊತೆಯಲ್ಲಿ ಮಾನ್ಯ ಸದಸ್ಯರು ಬರಲು ಇಷ್ಟಪಡದಿದ್ದರೆ ಅವರೇ ಪ್ರತ್ಯೇಕವಾಗಿ ಹೋಗಿಬರಲಿ. ಅವರ ಜೊತೆಯಲ್ಲಿ ಹೋದರೆ ನನ್ನನ್ನು ಬೇರೆ ಕಡೆ ಹೋಗಲು ಬಿಡುವುದಿಲ್ಲವೇನೋ ಎಂಬ ಅನುಮಾನ ಅವರಲ್ಲಿರಬಹುದು. ಆದರೆ ಅಂಥ ಅನುಮಾನ ಅವರಲ್ಲಿ ಬೇಡ. ಅಲ್ಲಿ ಹೆಲಿಕ್ಯಾಪ್ಟರ್‌ನಿಂದ ಇಳಿದಮೇಲೆ ಅವರು ಹೋಗುವ ಜಾಗಕ್ಕೆ ಅವರು ಹೋಗಲಿ, ನಾನು ಹೋಗುವ ಜಾಗಕ್ಕೆ ನಾನು ಹೋಗುತ್ತೇನೆ. I am ready to have a discussion in any manner I will invite all the party leaders. we will discuss the problems. ಅವರು ಒನ್ ಮ್ಯಾನ್ ಕಮಿಷನ್ ಮಾಡುವಂತೆ ಹೇಳಿದರು. If necessary, we will appoint One Man Commission.

ಶ್ರೀ ಡಿ. ದೇವರಾಜ ಅರಸ್.—ನಾಳೆ ಹೇಗಿದ್ದರೂ ನೀವು ಹೋಗಿಬರುತ್ತೀರಿ. ಬಂದಮೇಲೆ ಚರ್ಚೆಮಾಡೋಣ.

SRI R. GUNDU RAO.—I have not closed the subject matter. My mind is always open. Let us see, whether Magisterial enquiry is necessary. or Inquiry through higher officer. We will discuss and think over it. With mutual understanding and in a very cordial way we will set right the matter. The issue involved is not for one ; it is for everyone. If we proceed now by Seven O' clock tomorrow by Two O' clock we can come back to Bangalore. I am also equally anxious to know the facts. I invite the members who are anxious to come. The Helicopter is there and still three persons can be accomodated in it.

SRI D. DEVRAJ URS.—Let him take whoever he wants, I cannot go. Anyway that is not the question here. The question here is, if they want really to come to some understanding, I would even now say, let there be a Committee constituted by this House. Let it be one goodwill committee or a fact finding committee. ಈಗತಾನೆ ನನಗೆ ಬಂದ ವರದಿಯ ಪ್ರಕಾರ ಅಲ್ಲಿ ಪೋಲೀಸರು ಜನರನ್ನು ಹಿಡಿದುಹಾಕುತ್ತಿದ್ದಾರೆ. ಇವತ್ತು ಅಲ್ಲಿ ಪೋಲೀಸರು ಮತ್ತು ಪೋಲೀಸ್ ಅಧಿಕಾರಿಯವರು ಸತ್ತಿರುವುದು ತೀರಾ ಚಿಕ್ಕ ವಿಷಯ ಏನೂ ಅಲ್ಲ. ಇದನ್ನು ವಿಚಾರಣೆ ಮಾಡಿ ಎಂದರೆ ನಾವು ಇದನ್ನು ಮುಟ್ಟುವುದಿಲ್ಲವೆಂದು ಹೇಳುತ್ತಿದ್ದೀರಿ. ಈ ವಿಚಾರವನ್ನು ತಮ್ಮ ಇಷ್ಟಕ್ಕೆ ಬಿಟ್ಟಿದ್ದೇವೆ. ಇದರಲ್ಲಿ ನಾವು ನಿಮ್ಮನ್ನು ಒತ್ತಾಯ ಮಾಡುವುದಿಲ್ಲ. ಆದರೆ ಈ ಘಟನೆಯ ಹಿನ್ನೆಲೆ ಏನು ? ಸತ್ಯಾಂಶ ಏನೆಂಬುದನ್ನು ತಿಳಿದುಕೊಳ್ಳುವ ಸಲುವಾಗಿ ಒಬ್ಬ ಹೈ ಕೋರ್ಟ್ ನ್ಯಾಯಾಧೀಶರಿಂದ ತನಿಖೆಮಾಡಿಸಬೇಕಾಗುತ್ತದೆ. ಯಾರೋ ಮಾಡಿದ ಅಪರಾಧಕ್ಕೆ ಪೋಲೀಸರು ಬಲಿಯಾಗಿರಬಹುದು.

8-00 ಪಿ.ಎಂ

ಇಬ್ಬರು ಬಲಿಯಾಗಿದ್ದಾರೆ ಎನ್ನುವ ಕಾರಣ ಬರಬಾರದು. ಕೋತಿ ಮೊಸರನ್ನು ತಿಂದು ಮೇಕೆ ಬಾಯಿಗೆ ಒರಸಿತು ಎನ್ನುವ ಹಾಗೆ, ಇದರಲ್ಲಿ ಸಂಶಯ ಬರಬಾರದು. ಇದನ್ನು ಅವರು ತಿಳಿಯಬೇಕು.

ಈ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ಒಪ್ಪಬಾರದು ಎಂದು ಅವರು ಮನಸ್ಸು ಮಾಡಿಕೊಂಡಿದ್ದರೆ, ನೀವು ಜುಡಿಷಿಯಲ್ ಎನ್‌ಕ್ವೈರಿ ಮಾಡಲೇ ಬೇಕು ಎಂದು ಕಾನೂನು ಮಾಡುವುದಕ್ಕೆ ನಮಗೆ ಅಧಿಕಾರ ಇಲ್ಲ. ಹೇಳುವ ಕರ್ತವ್ಯ ನಮ್ಮದು. ಅದನ್ನು ನೀವು ಮಾಡುವುದಿಲ್ಲ ಎಂದರೆ ಅದು ನಿಮಗೆ ಬಿಟ್ಟದ್ದು.

ಒಬ್ಬರು ಮಾನ್ಯ ಸದಸ್ಯರು.—ವಿರೋಧ ಪಕ್ಷದ ಮಾನ್ಯ ಸದಸ್ಯರನ್ನೂ ಅಲ್ಲಿಗೆ ಕರೆದುಕೊಂಡು ಹೋಗಿ ಜೊತೆಗೆ ಈಗ ಎಲ್ಲಿ ಫೈರಿಂಗ್ ಆಗಿದೆಯೋ ಆ ಕ್ಷೇತ್ರದ ಎಂ.ಎಲ್.ಎ. ಅವರನ್ನು ಅಲ್ಲಿಗೆ ಕರೆದು ಕೊಂಡು ಹೋಗಿ.

MR. SPEAKER.—The discussion is concluded. Now the Minister for Animal Husbandry wants to make a statement as assured by him this morning.

MEMBERS.—Let him make the statement tomorrow as it is too late now.

MR. SPEAKER.—Tomorrow morning Education demand will be taken up. Now the House stands adjorned to meet at Nine A.M. tomorrow.

The House adjourned at Five minutes past Eight of the Clock to meet at Nine of the Clock on Wednesday the 23rd July 1980.

W D 2857